ಕರ್ನಾಟಕ ವಿಧಾನ ಸಭೆ
KARNATAKA LEGISLATIVE ASSEMBLY

ಶುಕ್ರವಾರ ದಿನಾಂಕ ೨೨ನೇ ಡಿಸೆಂಬರ್ ೧೯೮೯, ಪುಷ್ಯ ೧, ೧೯೧೧ ಶಕ

ಸದನವು ವಿಧಾನಸೌಧದಲ್ಲಿರುವ ವಿಧಾನ ಸಭೆಯ ಸಭಾಂಗಣದಲ್ಲಿ
ಬೆಳಿಗ್ಗೆ ೯-೧೪ ಘಂಟೆಗೆ ಸಮಾವೇಶಗೊಂಡಿತು.

[ಅಧ್ಯಕ್ಷರು (ಶ್ರೀ ಎಸ್. ಎಂ. ಕೃಷ್ಣ) ಅವರು ಪೀಠವನ್ನು ಅಲಂಕರಿಸಿದರು].

ನಿಲುವಳಿ ಸೂಚನಾ ಪ್ರಸ್ತಾವನೆ

ಶ್ರೀ ಡಿ. ಬಿ. ಚಂದ್ರೇಗೌಡ (ಮಾನ್ಯ ವಿರೋಧ ಪಕ್ಷದ ನಾಯಕರು).—ಮಾನ್ಯ ಅಧ್ಯಕ್ಷರೇ ನಾನು ನಿಯಮಾವಳಿ ೫೯ರ ಪ್ರಕಾರ ಒಂದು ನಿಲುವಳಿ ಸೂಚನೆ ನೋಟೀಸನ್ನು ಕಳುಹಿಸಿದ್ದೇನೆ. ಇದು ಬಹಳ ಮುಖ್ಯವಾದಂಥ ವಿಚಾರ. ಡಿಸೆಂಬರ್ ೨೦ನೇ ತಾರೀಖಿನ ಟೈಮ್ಸ್ ಆಫ್ ಇಂಡಿಯಾ ಪತ್ರಿಕೆಯಲ್ಲಿ ಒಂದು ವಿಚಾರ ಪ್ರಸ್ತಾಪಕ್ಕೆ ಬಂದಿದೆ. ಅದರಲ್ಲಿ ರಾಜ್ಯಸರ್ಕಾರದ ಮಂತ್ರಿಗಳೊಬ್ಬರ ಹೆಸರು ಇರುವುದರಿಂದ ಮತ್ತು ಇದು ಕಾನೂನು ವಿಷಯವಾಗಿರುವುದರಿಂದ, ಇಂತಹ ಸಂದರ್ಭದಲ್ಲಿ ವಿಚಾರಣೆಗೆ ಒಳಪಡಿಸತಕ್ಕಂಥ ಕಮಿಷನ್ ಆಫ್ ಎನ್‌ಕ್ವೈರಿ ಆಕ್ಟ್ ಕೆಳಗಡೆ.....

ಶ್ರೀ ಎಂ. ವೀರಪ್ಪಮೊಯಿಲಿ (ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು). — ಮಾನ್ಯ ಅಧ್ಯಕ್ಷರೇ, ತಾವು ಸ್ವಲ್ಪ ಈಲ್ಡ್ ಆಗುವುದಾದರೆ, ಈ ವಿಚಾರವನ್ನು ನಿಲುವಳಿ ಸೂಚನೆ ಮುಖಾಂತರ ಸನ್ಮಾನ್ಯ ವಿರೋಧ ಪಕ್ಷದ ನಾಯಕರು ಈ ಸದನದಲ್ಲಿ ತಂದಿದ್ದಾರೆ. ಈ ವಿಚಾರವನ್ನು ಇಲ್ಲಿ ಪ್ರಸ್ತಾಪ ಮಾಡುವುದಕ್ಕೆ ಅಡ್ಡಿ ಮಾಡುತ್ತೇವೆ ಎಂದು ತಾವು ತಿಳಿಯಬಾರದು. ಇದು ಸನ್ಮಾನ್ಯ ಸಚಿವರೊಬ್ಬರಿಗೆ ಸಂಬಂಧಪಟ್ಟ ವಿಚಾರವಾಗಿರುವುದರಿಂದ the process of natural justice will have to be undergone.

MR. SPEAKER.—For Natural justice the Minister should have been present in the house. I am not really concerned about the natural justice to the individual ministers but I am concerned about the natural justice to the House.

ಶ್ರೀ ಡಿ. ಬಿ. ಚಂದ್ರೇಗೌಡ.—ನಿಯಮ ೫೯ರ ಪ್ರಕಾರ ನಿಲುವಳಿ ಸೂಚನೆಯನ್ನು ಈ ಸದನದಲ್ಲಿ ಚರ್ಚೆ ಮಾಡುವುದಕ್ಕೆ ತಾವು ಅನುಮತಿ ಕೊಡದೆ ನಾವು ಪ್ರಸ್ತಾಪ ಮಾಡುವ ಹಾಗೇ ಇಲ್ಲ. ಆದುದರಿಂದ ತಪ್ಪು ಮನಸ್ಸನ್ನು ನಾನು ಮೊದಲು ಒಲಿಸಿಕೊಳ್ಳಬೇಕು ಆಥವಾ ತಮಗೆ ಕನ್‌ವಿನ್ಸ್ ಮಾಡಬೇಕು.

ಅಧ್ಯಕ್ಷರು.—ಪ್ರತಿಯೊಂದು ನಿಲುವಳಿ ಸೂಚನೆ ಕೂಡಾ ನನ್ನ ಗಮನಕ್ಕೆ ಬಂದ ತಕ್ಷಣ ತಮ್ಮನ್ನು ಕೇಳಿಯೇ ನಾನು ಅದನ್ನು ನಿರಾಕರಿಸಬೇಕೆಂಬ ನಿಯಮ ಇಲ್ಲ. ಇದನ್ನು ತಾವೂ ಒಪ್ಪುತ್ತೀರಿ. ಹಾಗೆ ಮಾಡುವುದಕ್ಕೆ ಅವಕಾಶವೂ ಇದೆ.

ಶ್ರೀ ಡಿ. ಬಿ. ಚಂದ್ರೇಗೌಡ.—ತಾವು ಹಾಗೆ ಮಾಡುವುದಿಲ್ಲ ಎಂಬ ವಿಶ್ವಾಸ ನವಂಗಿದೆ.

ಅಧ್ಯಕ್ಷರು.—ಪ್ರೈಮಾಫೇಸಿಯಾಗಿ ಅದರಲ್ಲಿ ಯಾವ ಸಬ್‌ಸ್ಟೆನ್ಸ್ ಇಲ್ಲ ಎನ್ನತಕ್ಕಂಥಾದ್ದು ಕಂಡು ಬಂದರೆ ನಾನು ಅದನ್ನು ನಿರಾಕರಿಸಬಹುದು. ಆನಂತರ ಅದನ್ನು ಇಲ್ಲಿ ಮೆನ್‌ಷನ್ ಮಾಡುವುದಕ್ಕೆ ಅವಕಾಶ ಕೊಡದೇ ಇರಬಹುದು. ಇದು ಸದನದ ಮುಂದೆ ಮೊದಲನೇ ಅಧಿವೇಶನದಲ್ಲಿ ಬಂದಿರತಕ್ಕಂಥ ಎರಡನೇ ನಿಲುವಳಿ ಸೂಚನಾ ಪ್ರಸ್ತಾಪನೆ ಎಂದು ತಮಗೆ ಮೆನ್‌ಷನ್ ಮಾಡುವುದಕ್ಕೆ ಅವಕಾಶ ಕೊಟ್ಟಿದ್ದೇನೆ. ಇದರ ಬಗ್ಗೆ ನನ್ನದೇ ಅದಂಥ ನಿಖರವಾದ ಅಭಿಪ್ರಾಯಕ್ಕೆ

ಬಂದಿದ್ದೇನೆ. ಒಂದೆರಡು ನಿಮಿಷದಲ್ಲಿ ತಾವು ಹೇಳುವುದನ್ನು ಹೇಳಿದರೆ ನಾನು ನನ್ನ ಕಾರಣಗಳೆನ್ನು ಹೇಳುತ್ತೇನೆ.

ಶ್ರೀ ಡಿ. ಬಿ. ಚಂದ್ರೇಗೌಡ.—ಮಾನ್ಯ ಅಧ್ಯಕ್ಷರೇ, ಕೋಟ್ಯಾಂತರ ರೂಪಾಯಿಗಳ ಆಸ್ತಿ ಲೂಟಿ ಯಾಗಿರುವುದನ್ನು ಎರಡು ನಿಮಿಷದಲ್ಲಿ ಹೇಳಿಬಿಡಿ ಎಂದರೆ ನನಗೆ ಕಷ್ಟವಾಗುತ್ತದೆ. ಮೊದಲನೆಯದಾಗಿ ಅನೇಕ ಶಾಸನಬದ್ಧ ಸಂಸ್ಥೆಗಳಿಂದ ನನಗೆ ತಿಳಿದುಬಂದಿರತಕ್ಕಂಥ ಮಾಹಿತಿಗಳನ್ನು ಅನುಸರಿಸಿ, ಪತ್ರಿಕೆಯಲ್ಲಿ ಬಂದ ವರದಿಯನ್ನಷ್ಟೇ ಆಧರಿಸಿ ತಪ್ಪು ಮುಂದೆ ಪುಸ್ತಾಪ ಮಾಡಬೇಕೆಂದು ನಾನು ನಿಂತಿಲ್ಲ. ಇಲ್ಲಿ ಒಂದು ವಕ್ಫ್ ಸಂಸ್ಥೆ ಇದೆ. It is a trust created under law. ಇದು ಧಾರ್ಮಿಕ ಸಂಸ್ಥೆ ಇದೆ. ಇದಕ್ಕೆ ಬರತಕ್ಕಂಥ ಆಸ್ತಿ ಯಾರು ಡೋನರ್ಸ್ ಇರುತ್ತಾರೆ ಅವರಿಂದ ಬರುತ್ತದೆ. ಇಲ್ಲಿ ಯಾವುದು ಬೇರೆ ಬೇರೆ ಆಸ್ತಿಗಳು ಇಲ್ಲ. ಅಲ್ಪಸಂಖ್ಯಾತರ ಅಭಿವೃದ್ಧಿಗಾಗಿ ಇದು ವಿಶೇಷವಾಗಿ ಮುಸ್ಲಿಮರ ಬಾಂಧವರ ಅಭಿವೃದ್ಧಿಗಾಗಿ ತಮ್ಮದೇ ಆದಂಥ ಒಂದು ವ್ಯವಸ್ಥೆ ಮಾಡಿ ಕೊಂಡಿದ್ದಾರೆ. ಇದಕ್ಕೆ ನಾವು ಒಂದು ಶಾಸನ ರೂಪ ಕೊಟ್ಟಿದ್ದೇವೆ ಮತ್ತು ಇದನ್ನು ಬಹಳ ಮುಖ್ಯವಾಗಿ ನೋಡಬೇಕಾಗಿದೆ. ಯಾವ ಯಾವ ವಕ್ಫ್ ಆಸ್ತಿಪಾಸ್ತಿಗಳು ಇದ್ದವು.....

ಸಭಾಧ್ಯಕ್ಷರು.—ನೀವು ವಿವರಕ್ಕೆ ಹೋಗುತ್ತಿದ್ದೀರಿ,

ಶ್ರೀ ಡಿ. ಬಿ. ಚಂದ್ರೇಗೌಡ.—ಈ ಆಸ್ತಿಪಾಸ್ತಿಗಳಿಗೆ ರಕ್ಷಣೆ ಕೊಡುವುದಕ್ಕೆ, ಯಾವ ಒಂದು ಉದ್ದೇಶಕ್ಕಾಗಿ ಈ ಸಂಸ್ಥೆಗೆ ಅವರು ದಾನ ಕೊಟ್ಟಿರುತ್ತಾರೆ, ಆ ಉದ್ದೇಶವನ್ನು ಬಿಟ್ಟು ಬೇರೆ ಉದ್ದೇಶಕ್ಕಾಗಿ ಅಂದರೆ ಇಲ್ಲಿ ಹಣ ಆಗಬಹುದು ಅಥವಾ ಆಸ್ತಿ ಆಗಬಹುದು, ಇದನ್ನೆಲ್ಲಾ ಖರ್ಚು ಮಾಡುವಂತಹ ಪ್ರಸಂಗಗಳು ಇವೆ ಎಂದು ಹಿಂದಿನ ಸರ್ಕಾರ ಈ ಬಗ್ಗೆ ಗಮನಹರಿಸಿ ಆಗ ಇದ್ದಂತಹ ಮಾನ್ಯ ಮಂತ್ರಿಗಳಾದ ದಿವಂಗತ ಶ್ರೀವಾನ್ ಸಜೀರ್‌ಸಾಬ್‌ರವರು ಇದನ್ನು ವಿಶೇಷವಾಗಿ ಗಮನಿಸಿ ಒಂದಲ್ಲ ಎರಡಲ್ಲ ನೂರಾರು ಕೋಟಿ ರೂಪಾಯಿಗಳ ಆಸ್ತಿ ಅವ್ಯವಹಾರ ನಡೆದಿದೆ ಎಂದು ಆ ಬಗ್ಗೆ ಮಾಹಿತಿ ಸಂಗ್ರಹಿಸಿ ಕಮಿಷನ್ ಆಫ್ ಎನ್‌ಕ್ವೈರಿ ಅನ್ನು ನೇಮಕ ಮಾಡಿದರು ಕಮಿಷನ್ ಆಫ್ ಎನ್‌ಕ್ವೈರಿಯವರು ಸಾಕಷ್ಟು ವಿವರಕ್ಕೆ ಹೋಗಿದ್ದಾರೆಂದು ನಾನು ಹೇಳುವುದಿಲ್ಲ. ಪತ್ರಿಕೆಗಳಲ್ಲಿ ಬಂದಿರತಕ್ಕಂಥ ವರದಿ ಪ್ರಕಾರ ತಾತ್ಕಾಲಿಕ ವರದಿಯೊಂದನ್ನು ರಾಜ್ಯಪಾಲರಿಗೆ ಸಲ್ಲಿಸಿದ್ದಾರೆ. ಆ ವರದಿ ಈ ಸರ್ಕಾರಕ್ಕೂ ಬಂದಿರಬಹುದು. ಹೀಗೆ ಕೊಟ್ಟಿರತಕ್ಕಂಥ ವರದಿಯನ್ನು ಸದನದ ಮುಂದೆ ಇಡಬೇಕಾಗಿತ್ತು. ಒಂದು ಕಾಲದಲ್ಲಿದ್ದ ಆ ಸಂಪ್ರದಾಯ ಈಗ ಇಲ್ಲ. ಶಾಸನಬದ್ಧವಾಗಿ ಇಲ್ಲಿ ಇಡಲೇಬೇಕು ಎನ್ನುವ ನಿಯಮ ಇಲ್ಲ. ಕಮಿಷನ್ ಆಫ್ ಎನ್‌ಕ್ವೈರಿಯಲ್ಲಿ ಬರತಕ್ಕಂಥ ಪ್ರತಿಯೊಂದು ವರದಿಯನ್ನು ಇಲ್ಲಿ ಇಡತಕ್ಕಂಥ ನಿಯಮ ಈಗ ಇಲ್ಲ, ಹಿಂದೆ ಇತ್ತು. ಠಕ್ಕರ್ ಮತ್ತು ನಟರಾಜನ್ ಆಯೋಗದ ವರದಿ ಬಂದಾಗ ಆ ಆಕ್ಟ್‌ಗೆ ಅಮೆಂಡ್‌ಮೆಂಟ್ ಮಾಡಿದ್ದಾರೆ. ಅದಕ್ಕೆ ಈಗ ಇಡಬಹುದು. ಅಥವಾ ಇಡದಿರಬಹುದು. ಮುಖ್ಯವಾಗಿ ಸದನದ ಹೊರಗೆ ಆ ವರದಿ ಉಳಿದರೆ ವಂಚನೆಗೆ ಒಳಗಾದಂತೆ ಆಗುತ್ತದೆ. ಇದು ಸಾರ್ವಜನಿಕರ ಗಮನಕ್ಕೆ ಬರಬೇಕು. ಲಕ್ಷಾಂತರ ಮುಸ್ಲಿಂ ಬಾಂಧವರ ವಿಚಾರ ಇದು. ತಾತ್ಕಾಲಿಕವಾಗಿ ಕೊಟ್ಟಿರತಕ್ಕಂಥ ವರದಿಯಲ್ಲಿ ಇದು ಇದೆ. ಈ ಕಮಿಷನ್ ಆಫ್ ಎನ್‌ಕ್ವೈರಿ ಏತಕ್ಕೆ ಮಾಡಿದರು.

ಅಧ್ಯಕ್ಷರು.—ಆ ವರದಿ ಕಾಪಿ ನಿಮ್ಮಲ್ಲಿ ಇದೆಯೇ ?

ಶ್ರೀ ಎಂ. ವೀರಪ್ಪಮೊಯ್ಲಿ.—ಅಧ್ಯಕ್ಷರೇ ನನ್ನದೊಂದು ಪಾಯಿಂಟ್ ಆಫ್ ಆರ್ಡರ್ ಇದೆ. ಈಗ ಕಮಿಷನ್ ಆಫ್ ಎನ್‌ಕ್ವೈರಿ ಬಗ್ಗೆ, ಹಾಗೂ ಆ ವರದಿ ಬಗ್ಗೆ ಎಲ್ಲಾ ವಿಚಾರವನ್ನು ನಮ್ಮ ವಿರೋಧ ಪಕ್ಷದ ನಾಯಕರು ಪ್ರಾತಿನಾಡುತ್ತಿದ್ದಾರೆ. ನಿಯಮ ೬೨ರಲ್ಲಿ ಕ್ಲಿಯರ್ ಆಗಿ ಹೇಳಿದೆ. ಅದು ಏನೆಂದರೆ ಯಾವುದೇ ನ್ಯಾಯಿಕ ಅಥವಾ ನ್ಯಾಯಿಕ ಸ್ವರೂಪದ ಪ್ರಕಾರ್ಯಗಳನ್ನು ನಿರ್ವಹಿಸುತ್ತಿರುವ ಯಾವುದೇ ಶಾಸನಬದ್ಧ ನ್ಯಾಯಾಧಿಕರಣ ಅಥವಾ ಶಾಸನಬದ್ಧ ಪ್ರಾಧಿಕಾರದ ಮುಂದೆ ಅಥವಾ ಯಾವುದೇ ವಿಷಯದ ಬಗ್ಗೆ ವಿಚಾರಣೆ ಅಥವಾ ತನಿಖೆ ನಡೆಸಲು ನೇಮಿತವಾದ ಯಾವುದೇ ಆಯೋಗ ಅಥವಾ ವಿಚಾರಣಾ ನ್ಯಾಯಾಲಯದ ಮುಂದೆ ಬಾಕಿ ಇರುವ ವಿಷಯದ ಮೇಲೆ ಚರ್ಚಿಸುವ ಯಾವುದೇ ನಿಲುವಳಿ ಸೂಚನೆ ಇನ್ನು ತರಲು ಸಾಮಾನ್ಯವಾಗಿ ಅವಕಾಶವನ್ನು ಕೊಡತಕ್ಕದ್ದಲ್ಲ. ಆದ್ದರಿಂದ ಸನ್ಮಾನ್ಯ ವಿರೋಧಪಕ್ಷದ ನಾಯಕರು ಹೇಳಿದ ಪ್ರಕಾರ commission has not wound up its activities. ತಾತ್ಕಾಲಿಕ ವರದಿಯನ್ನು ಸನ್ಮಾನ್ಯ ರಾಜ್ಯಪಾಲರಿಗೆ ಕೊಟ್ಟಿದ್ದಾರೆ. ಅದೂ ಪತ್ರಿಕೆಗಳಲ್ಲಿ ಬಂದಂತಹ ವರದಿ.

ಅಧ್ಯಕ್ಷರು.—ವರದಿ ಕಾಪಿ ನಿಮ್ಮ ಹತ್ತಿರ ಇದೆಯೇ ?

ಶ್ರೀ ಎಂ. ವೀರಪ್ಪಮೊಯ್ಲಿ.—ರಾಜ್ಯಪಾಲರಿಗೆ ಕೊಟ್ಟಿದ್ದಾರೆ. ನಮಗೆ ಬಂದಿಲ್ಲ.

ಶ್ರೀ ಡಿ. ಬಿ. ಚಂದ್ರೇಗೌಡ.—ನಿಯಮ ೬೨ರಲ್ಲಿ ಏನು ಹೇಳಿದ್ದಾರೆ, ಅದನ್ನು ನೋಡಿ.....

ಶ್ರೀ ಪಿ.ಜಿ.ಆರ್. ಸಿಂಧ್ಯಾ.—ಸ್ವಾಮಿ, ನಾವು ವಿರೋಧಪಕ್ಷದಲ್ಲಿದ್ದೇವೆ. ನಮಗೆ ವರದಿ ಕಾಪಿ ಎಲ್ಲಿಂದ ಬರಬೇಕು.

ಶ್ರೀ ಬಿ. ಎಸ್. ಯಡಿಯೂರಪ್ಪ.—ಸ್ವಾಮಿ ನನ್ನದೊಂದು ಕ್ರಿಯಾಲೋಪ. ವರದಿ ಕಾಪಿ ನನ್ನ ಹತ್ತಿರ ಇದೆ. ಮಾನ್ಯ ಸಚಿವರಿಗೆ ಬೇಕಾದರೆ ನಾನು ಕಳುಹಿಸಿಕೊಡುತ್ತೇನೆ.

ಅಧ್ಯಕ್ಷರು.—ಮಾನ್ಯ ಸಚಿವರಾದ ವೀರಪ್ಪ ಮೊಯ್ಲಿಯವರು ನಿಮಗಿಂತ ಮೊದಲೇ ಪಾಯಿಂಟ್ ಆಫ್ ಆರ್ಡರ್ ಎತ್ತಿದ್ದಾರೆ.

ಶ್ರೀ ಎಂ. ವೀರಪ್ಪ ಮೊಯಿಲಿ — ಸನ್ಮಾನ್ಯ ಅಧ್ಯಕ್ಷರೇ, ನಾನಂ ಮೊದಲೇ ಹೇಳಿದಂತೆ ನಮ್ಮ ಸರ್ಕಾರದ ಮಟ್ಟಿಗೆ ಈ ಸದನದ ಮಟ್ಟಿಗೆ Commission of Inquiry has not finalised its report. We have not received the copy officially. This I would like to speak as far as our Government is concerned and this House is concerned ವಿಚಾರ ಇರುವುದಿಷ್ಟೇ, As on today, Commission is there, it exists and they are yet to give a report as far as we are concerned. ಈಗ ಸನ್ಮಾನ್ಯ ರಾಜ್ಯಪಾಲರವರಿಗೆ, ಅವರು ತಾತ್ಕಾಲಿಕವಾದಂಥ ವರದಿ ಕೊಟ್ಟಿದ್ದಾರೆ. ಅದು ಫೈನಲ್ ವರದಿ ಆಗುವುದಿಲ್ಲ. ಆದ್ದರಿಂದ, ಅಧ್ಯಕ್ಷರೇ, ಈ ಬಗ್ಗೆ ನಮ್ಮ ಸರ್ಕಾರದ ಮಾಹಿತಿ ಪ್ರಕಾರ ನಮಗೆ ವರದಿ ಬಂದಿಲ್ಲ, ಕಮಿಷನ್ ಆಫ್ ಎನ್‌ಕ್ವೈರಿ ಆ್ಯಕ್ಟ್ ಪ್ರಕಾರ ಏನು ಆಯೋಗ ನೇಮಕವಾಗಿದೆ ಅದು ತನ್ನ ಕೆಲಸ ಕಾರ್ಯ ಮುಗಿಸಲಿ. ಅದು ಈಗಲೂ ಇದೆ. ಈ ಸದನದಲ್ಲಿ ಆ ವಿಚಾರ ಪ್ರಸ್ತಾಪವಾಗುವುದು ಸರಿಯೆಲ್ಲ, ಅದಂ ಇಲ್ಲಿ ಚರ್ಚೆ ಆಗುವುದರಿಂದ ಯಾವ ಸತ್ಯ ಸಂಗತಿ ಆಯೋಗದಿಂದ ಹೊರಗೆ ಬರಬೇಕೋ ಅದಕ್ಕೆ ಇದರಿಂದ ಬಾಧಕವಾಗುತ್ತದೆಂದು ನಾನು ಹೇಳುತ್ತೇನೆ

ಶ್ರೀ ಬಿ.ಎಸ್. ಯಡಿಯೂರಪ್ಪ.— ಮಾನ್ಯ ಅಧ್ಯಕ್ಷರೇ, ಪಾಯಿಂಟ್ ಆಫ್ ಆರ್ಡರ್.

SRI D. B. CHANDRE GOWDA.— Sir, I will explain my stand.

MR. SPEEKAR.— Before you explain, I would like to throw some light on this issue. In practice & Procedure of Parliament, it is stated.

> "There is no objection per se to the notice of adjournment motion being given simply because it happens to be based on a newspaper report, but the Speaker before accepting the motion must be in possession of further facts. Press reports unless admitted by Government cannot be accepted as authoritative for the purpose of an adjournment motion."
>
> "Where facts are not admitted by the Government, the member must adduce some authentic information to support his notice. In an appropriate case, the Speaker may allow the notice to stand over till next day so that further information could be gathered and placed before the House."

Then, "An adjournment motion does not lie when facts are in dispute or before they are available. When Government disputes the facts stated in the notice of adjournment motion, the Speaker accepts the Governmet verson of facts"

So, as on now, the Goverment is not in possession of any report, whether it is interim report or final report of what you have raised.

ಶ್ರೀ ಡಿ.ಬಿ. ಚಂದ್ರೇಗೌಡ.— ಇಲ್ಲಿ ಏನು ನಮ್ಮ ಸಂಸದೀಯ ಮಂತ್ರಿಗಳು ಪ್ರಸ್ತಾಪ ಮಾಡಿದ್ದಾರೆ, ಅದು ಈ ಕಮಿಷನ್ ಆಫ್ ಎನ್‌ಕ್ವೈರಿ ಆ್ಯಕ್ಟ್ ನೇಮಕಮಾಡಿರುವುದು ಯಾವುದೇ ಒಂದು ವಿಷಯಕ್ಕೆ ಸೀಮಿತವಾದುದಲ್ಲ. ಯಾವುದೋ ಕೊಲೆ ಪ್ರಕರಣ ಅಥವಾ ಇನ್ಯಾವುದೋ ನ್ಯಾಯಾಲಯದಲ್ಲಿ ನಡೆದ ಪ್ರಕರಣ ಅಲ್ಲ. ಇಲ್ಲಿ ೧೨೦ ಕೇಸ್‌ಗಳು ಇವೆ. They are before the commission. Every case is independent of the other and there cannot be any consolidated report. The very purpose of constituting an enquiry commission is to look into each case, not one case. So there are more than 120 cases pending. ಈಗ ಅವರು ತಮ್ಮ ವರದಿಯಲ್ಲಿ ನನಗೆ ತಿಳಿದಿರುವ ಹಾಗೆ ೧೫–೨೦ ಅಂಶಗಳ ಬಗ್ಗೆ ವಿವರಗಳನ್ನು ಸಲ್ಲಿಸಿದ್ದಾರೆ. ಇನ್ನೂ ೧೦೦ ಕೇಸ್‌ಗಳು ಇವೆ. ತಮಗೆ ಈ ವರದಿ ಕೊಡಬೇಕಾದರೆ ಕೊಡುತ್ತೇವೆ. ಅದು ಅಥೆಂಟಿಕೇಟ್ ಎಂದು ತಾವು ಒಪ್ಪಿದರೆ, ಮುಂದೆ ಅದು ಅಥೆಂಟಿಕೇಟ್ ಆಗಿ ಇಲ್ಲಿಗೆ ಬಂದರೆ...

MR. SPEAKER.— Commission of Inquiry consisted of three persons. I read it in one of the newspapers that two other members were not party to this report. I remember this much too many disputed facts are here.

೯.೩೦ ಎ.ಎಂ.

ಶ್ರೀ ಬಿ.ಎಸ್. ಯಡಿಯೂರಪ್ಪ.— ಸನ್ಮಾನ್ಯ ಅಧ್ಯಕ್ಷರೇ ನನ್ನದು point of order. ಇದೆ.

ಶ್ರೀ ಡಿ. ಎ. ಚಿನ್ನಪ್ಪ.—ಪಾಯಿಂಟ್ ಆಫ್ ಆರ್ಡರ್ ಮೇಲೆ ಪಾಯಿಂಟ್ ಆಫ್ ಆರ್ಡರೇ ಸ್ವಾಮಿ?

ಅಧ್ಯಕ್ಷರು.— ಯಡಿಯೂರಪ್ಪನವರೇ, ನೀವು ಸಬ್‌ಮಿಷನ್ ಅಂತ ಹೇಳಿ.

ಶ್ರೀ ಬಿ.ಎಸ್. ಯಡಿಯೂರಪ್ಪ.— ಆಯಿತು ಸ್ವಾಮಿ, ಓಪನೇ ನಿಯಮದಲ್ಲಿ

"ಯಾವುದೇ ನಾಯಿಕ ಅಥವಾ ನ್ಯಾಯಿಕ ಸ್ವರೂಪದ ಪ್ರಕಾರ್ಯಗಳನ್ನು ನಿರ್ವಹಿಸುತ್ತಿರುವ ಯಾವುದೇ ಶಾಸನಬದ್ಧ ನ್ಯಾಯಾಧಿಕರಣ ಅಥವಾ ಶಾಸನಬದ್ಧ ಪ್ರಾಧಿಕಾರದ ಮುಂದೆ ಅಥವಾ ಯಾವುದೇ ವಿಷಯದ ಬಗ್ಗೆ ವಿಚಾರಣೆ ಅಥವಾ ತನಿಖೆ ನಡೆಸಲು ನೇಮಿತವಾದ ಯಾವುದೇ ಆಯೋಗ ಅಥವಾ ವಿಚಾರಣಾ ನ್ಯಾಯಾಲಯದ ಮುಂದೆ ಬಾಕಿ ಇರುವ ವಿಷಯದ ಮೇಲೆ ಚರ್ಚಿಸುವ ಯಾವುದೇ ನಿಲುವಳಿ ಸೂಚನೆಯನ್ನು ತರಲು ಸಾಮಾನ್ಯವಾಗಿ ಅವಕಾಶವನ್ನು ಕೊಡತಕ್ಕುದಲ್ಲ." ಎಂದಿದೆ. ಇಲ್ಲಿ 'ಸಾಮಾನ್ಯವಾಗಿ' ಎಂದಿದೆ. ಅಂದರೆ ವಿಶೇಷವಾಗಿ ನಿಮಗೆ ಮನದಟ್ಟಾದರೆ ಇದಕ್ಕೆ ಅವಕಾಶ ಮಾಡಿಕೊಡಬಹುದು ಅನಂತರ "ಪರಂತು ಅಂಥ ವಿಚಾರವನ್ನು ಚರ್ಚಿಸಲು ಅವಕಾಶ ಕೊಡುವುದರಿಂದ ಶಾಸನಬದ್ಧ ನ್ಯಾಯಾಧಿಕರಣ, ಪ್ರಾಧಿಕಾರ, ಆಯೋಗ ಅಥವಾ ವಿಚಾರಣಾ ನ್ಯಾಯಾಲಯದವರು ಆ ವಿಷಯವನ್ನು ಪರಿಶೀಲಿಸಲು ಬಾಧಕವುಂಟಾಗುವ ಸಂಭವವಿಲ್ಲವೆಂದು ಅಧ್ಯಕ್ಷರಿಗೆ ಮನವರಿಕೆಯಾದರೆ ಅವರು ತಮ್ಮ ವಿವೇಚನಾನುಸಾರ ವಿಚಾರಣೆಯ ಕಾರ್ಯವಿಧಾನ ಅಥವಾ ವಿಷಯ ಅಥವಾ ಹಂತಕ್ಕೆ ಸಂಬಂಧಪಟ್ಟಂತೆ ಅಂಥ ವಿಷಯವನ್ನು ಕುರಿತು ಸಭೆಯಲ್ಲಿ ಚರ್ಚೆ ನಡೆಸಲು ಅವಕಾಶ ಕೊಡಬಹುದು".

ಈಗ ಸನ್ಮಾನ್ಯ ಅಧ್ಯಕ್ಷರೇ ಕೋಟ್ಯಾಂತರ ರೂಪಾಯಿಗಳ ಅವ್ಯವಹಾರ ಇದರಲ್ಲಿ ನಡೆದಿರುವುದರಿಂದ ಕೋಡಿದರೆ ಕಮಿಷನ್ ಆಫ್ ಎನ್‌ಕ್ವೈರಿಯವರು ಇಂಟರಿಮ್ ರಿಪೋರ್ಟ್ ಕೊಟ್ಟಿರುವ ಬಗ್ಗೆ ನಾನು ವಿವರಕ್ಕೆ ಹೋಗುವುದಿಲ್ಲ. ಈ ಸರ್ಕಾರ ರಚನೆಯಾದ ನಾಲ್ಕಾರು ದಿವಸದಲ್ಲೇ ಕಮಿಷನ್ ಮೇಲೆ ಒತ್ತಡ ಬಂದ ಮೇಲೆ ಅವರು ತಕ್ಷಣ ಸರ್ಕಾರಕ್ಕೆ ಹೆದರಿ ರಾಜ್ಯಪಾಲರಿಗೆ ಇಂಟರಿಮ್ ರಿಪೋರ್ಟ್ ಕೊಟ್ಟಿದ್ದಾರೆ. ಸರ್ಕಾರದ ಒಬ್ಬ ಪ್ರಮುಖ ಮಂತ್ರಿಯ ಪಾತ್ರ ಇದರಲ್ಲಿರುವುದರಿಂದ ಇದನ್ನು ಮುಚ್ಚಿಹಾಕಲು ಅವಕಾಶ ಇರುವುದರಿಂದ ಒರಿಜಿನಲ್ ರೆಕಾರ್ಡ್‌ಗಳನ್ನು ತರಿಸಿ ತಮ್ಮ ಆಧೀನದಲ್ಲಿಟ್ಟು

ಕೊಳ್ಳುವುದಕ್ಕೆ ಅವಕಾಶವಿದೆ. ಆದ್ದರಿಂದ ರಾಜ್ಯಪಾಲರಿಗೆ ಕೊಟ್ಟಿರುವ ಇಂಟೆರಿಮ್ ರಿಪೋರ್ಟ್ ಸರ್ಕಾರದ ಹಸ್ತಕ್ಷೇಪದಿಂದ ಬದಲಾಗುವುದನ್ನು ತಪ್ಪಿಸಲು ತಮ್ಮ ವಶಕ್ಕೆ ಅದನ್ನು ತೆಗೆದುಕೊಳ್ಳಬೇಕಂ.

ಅಧ್ಯಕ್ಷರು.— ಏನು, ರಾಜ್ಯಪಾಲರ ಹಸ್ತಕ್ಷೇಪದಿಂದ...

ಶ್ರೀ ಬಿ. ಎಸ್. ಯಡಿಯೂರಪ್ಪ.— ಇದರಲ್ಲಿ ಸರ್ಕಾರದ ಪ್ರಮುಖ ವ್ಯಕ್ತಿಯ ಕೈವಾಡದ ಆರೋಪವಿದೆ ಎಂದೆ. ನನ್ನ ಬಳಿ ಇರುವ ನಕಲು ರಿಪೋರ್ಟನ್ನು ತಮಗೆ ಕೊಡುತ್ತೇನೆ. ನನಗೆ ಭಯವಿರುವುದೇನೆಂದರೆ ಹಿಂದೆ ಅನೇಕ ಸಲ ಇಂಟೆರಿಮ್ ರಿಪೋರ್ಟ್ ಕೊಟ್ಟಂಥ ಕಾಲದಲ್ಲಿ ಅದು ಅದಲು ಬದಲಾಗಿರುವ ಸಂದರ್ಭಗಳು ಇವೆ.

ಅಧ್ಯಕ್ಷರಂ.— ಎಲ್ಲಿ? ಕಳೆದ ೬ ವರ್ಷಗಳಲ್ಲಿ ಆ ರೀತಿ ಆಗಿದೆಯೇ?

ಶ್ರೀ ಬಿ. ಎಸ್. ಯಡಿಯೂರಪ್ಪ.— ಇಲ್ಲೇ ಆಗಿದೆ. ನಿರ್ದಿಷ್ಟ ಪ್ರಕರಣಗಳನ್ನು ಬೇಕಾದರೆ ನಾನಂ ಉಲ್ಲೇಖ ಮಾಡಬಲ್ಲೆ. ಸರ್ಕಾರದ ಒಬ್ಬ ಮಂತ್ರಿ ಕಮಿಷನಿನ ಒಬ್ಬ ಪ್ರಾಮಾಣಿಕ ಅಧಿಕಾರಿಗೆ ಪ್ರಾಣ ಬೆದರಿಕೆ ಹಾಕಿದ್ದರಿಂದ ಆತ ತಕ್ಷಣ ರಾಜ್ಯಪಾಲರಿಗೆ ಅದನ್ನು ಕೊಟ್ಟಿದ್ದಾರೆ.

MR. SPEAKER.— You are going into the facts which are not relevant at this stage.

ಶ್ರೀ ಬಿ. ಎಸ್. ಯಡಿಯೂರಪ್ಪ.— ಈಗ ಸರ್ಕಾರಕ್ಕೆ ಇಂಟೆರಿಮ್ ರಿಪೋರ್ಟ್ ಬಂದಿದೆಯೋ ಇಲ್ಲವೋ ಎಂದು ಕೇಳುತ್ತೇನೆ.

ಶ್ರೀ ಎಂ. ವೀರಪ್ಪ ಮೊಯಿಲಿ.— ಅಧ್ಯಕ್ಷರೇ, ಆ ವರದಿ ಸರ್ಕಾರಕ್ಕೆ ಬಂದಿಲ್ಲ. ಹಿರಿಯ ಸದಸ್ಯರಾದ ಯಡಿಯೂರಪ್ಪನವರು ವರದಿ ಅದಲು ಬದಲಾಗಬಹುದೆಂದು ಹೇಳಿದ್ದಾರೆ. ಅದು ರಾಜ್ಯಪಾಲರ ಬಳಿ ಇದೆ. ಆದ್ದರಿಂದ ಈ ಬಗ್ಗೆ ಇಲ್ಲಿ ಆಪಾದನೆ ಮಾಡುವುದು ಸರಿಯಲ್ಲ. I think that has to be expunged.

MR. SPEAKER— If this is the insinuation it can be taken out of the record. I don't think you meant to say like that. ನನಗೆ ಗೊತ್ತು ನೀವು ಆ ತರಹ ಹೇಳುವುದಿಲ್ಲ ಎಂದು.

ಶ್ರೀ ಬಿ. ಎಸ್. ಯಡಿಯೂರಪ್ಪ.— ಹೇಳುವುದಿಲ್ಲ. ಒಂದು ಪಕ್ಷ ಹೇಳಿದರೆ ಸರಿಪಡಿಸಿಕೊಳ್ಳುತ್ತೇನೆ. ಅನೇಕ ಸಲ ಕಮಿಷನ್ ಆಫ್ ಎನ್‌ಕ್ವೈರಿ ನಡೆದ ಕಾಲದಲ್ಲಿ ಅನೇಕ ಒತ್ತಡಗಳು ಸರ್ಕಾರದಿಂದ ಆಗಿ ವರದಿಯಲ್ಲಿ ಹಸ್ತಕ್ಷೇಪವಾಗಿದೆ. ಯಾವುದೇ ಕಮಿಶನ್‌ನ ವರದಿ ಇದುವರೆವಿಗೂ ಬಹಿರಂಗವಾಗಿಲ್ಲ. ಹಾಗೆಯೇ ವರ್ಕ್ಸ್ ಆಸ್ಪಿಗೆ ಸಂಬಂಧಪಟ್ಟ ಹಾಗೆ ನೂರಾರು ಕೋಟಿ ರೂಪಾಯಿಗಳ ಅವ್ಯವಹಾರವಾಗಿರುವುದರಿಂದ ಮಾನ್ಯ ವಿರೋಧ ಪಕ್ಷದ ನಾಯಕರು ಎತ್ತಿರತಕ್ಕಂಥ ವಿಚಾರವು ಸರಿಯಾಗಿದೆ. ದಯವಾಡಿ ಗವರ್ನಮೆಂಟ್ ಸೀಯುವ ಸೂಚನೆಗೆ ಅವಕಾಶ ಕೊಟ್ಟು ಚರ್ಚೆಗೆ ಅನುವು ಮಾಡಿಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಡಿ. ಬಿ. ಚಂದ್ರೇಗೌಡ.— ನಾನು ಹೇಳುವುದೇನೆಂದರೆ ಇವೊತ್ತು ಎನ್‌ಕ್ವಾಯರಿ ಕಮಿಶನ್‌ನ ವರದಿಯು ಸರಕಾರದ ಕೈಯಲ್ಲಿ ಇದೆಯೋ ಇಲ್ಲವೊ ನನಗೆ ಗೊತ್ತಿಲ್ಲ, ಅವರು ಇಲ್ಲ ಎಂದು ಹೇಳಿದರೆ ನಾವು ಅದನ್ನು ಒಪ್ಪಿಕೊಳ್ಳುತ್ತೇವೆ, ಆದರೆ ವರದಿಯು ರಾಜ್ಯಪಾಲರ ಕೈ ಸೇರಿದೆ ಎನ್ನುವ ವಿಚಾರವು ನಿರ್ವಿವಾದವಾಗಿದೆ. ಇಬ್ಬರು ಅದನ್ನು ವಿರೋಧ ಮಾಡಿದ್ದಾರೆಂದು ತಾವು ಹೇಳಿದ್ದೀರಿ. ನನ್ನ ವಾದ ಏನಿದೆ ಅಂದರೆ, ಈ ವರದಿ ಪತ್ರಿಕೆಯಲ್ಲಿ ಬಂದಿರತಕ್ಕಂಥ ವಿಚಾರದಲ್ಲಿ ಯಾವುದೇ ಮಂತ್ರಿಗಳ ಬಗ್ಗೆ ಆಪಾದನೆಯನ್ನು according to the press reports, the Commission has come to the conclusion basing the documents and the evidence adduced before it. ಎರಡನೇಯದಾಗಿ ಈ ವಿಚಾರಣಾ ಆಯೋಗದ ವರದಿಯನ್ನು ಏನಾದರೂ ಸರಕಾರಕ್ಕೆ ಕೊಟ್ಟರೆ, ಸರಕಾರ ಅದನ್ನು ಸ್ವೀಕರಿಸತಕ್ಕಂಥ ಅಥವಾ ಅದನ್ನು ತಿರಸ್ಕರಿಸತಕ್ಕಂಥ ಅಧಿಕಾರವನ್ನು ಹೊಂದಿದೆ. ಈಗ ಬಂದಿರುವ ಆಪಾದನೆಯು ಯಾರ ವಿರುದ್ಧ ಇದೆಯೋ ಅವರು ಈಗ ಮಂತ್ರಿಯಾಗಿದ್ದರೆ ಈ ವರದಿಗೆ ಗೌರವ ಬರುತ್ತದೆಯೇ ? ಈ ವರದಿಯನ್ನು ಸರಕಾರದವರು ಒಪ್ಪಬೇಕಾದರೆ ಅಥವಾ ಬಿಡಬೇಕಾದರೆ, ಸಂಬಂಧಪಟ್ಟ ಮಂತ್ರಿಯವರು ಅದನ್ನು ಪರಿಶೀಲನೆ ಮಾಡಬೇಕಂ. ಆದರೆ ವರದಿಯಲ್ಲಿನ ಆಪಾದಿತರೇ ಈ ಇಲಾಖೆಯ ಮಂತ್ರಿಯಾಗಿರುವುದರಿಂದ ಅದಕ್ಕೆ ನ್ಯಾಯ ದೊರೆತೀತೇ?

ಅಧ್ಯಕ್ಷರು — ಈಗ ನೀವು ಒಂದು ಪತ್ರಿಕೆಯಲ್ಲಿನ ವಿಚಾರವನ್ನು ಕೋಟ್ ಮಾಡಿದ್ದೀರಿ. two panel members have said that they are not party to the report. So, One is a disputed fact. ಇನ್ನೊಂದು ವಿಚಾರ ಅಂದರೆ ರಾಜ್ಯಪಾಲರಿಗೆ ತಾತ್ಕಾಲಿಕ ವರದಿಯು ಹೋಗಿದೆ ಎನ್ನತಕ್ಕಂಥಾದ್ದು, ಈ ಸರಕಾರದ ಹತ್ತಿರ ಆ ವರದಿಯೂ ಇಲ್ಲ. ಆದ್ದರಿಂದ...

SRI D. B. CHANDRE GOWDA.— What I humbly submit is. ತಮ್ಮಿಂದ ರಕ್ಷಣೆಯನ್ನು ನಾನು ಎಲ್ಲಿ ಬಯಸುತ್ತೇನೆ ಅಂದರೆ, ಈ ವರದಿ ಬಗ್ಗೆ ನಾನು ಹೇಳುವಾಗ ಜವಾಬ್ದಾರಿಯಿಂದ ಹೇಳಿದ್ದೇನೆ. ಆ ವರದಿಯನ್ನು ಇಬ್ಬರು ಸದಸ್ಯರು ಒಪ್ಪಿಕೊಂಡಿಲ್ಲ ಎನ್ನತಕ್ಕಂಥಾದ್ದು ನನ್ನ ವಾದಕ್ಕೆ ಪುನಃ ಪೂರಕವಾಗುತ್ತದೆ. ಈಗ ಮಾನ್ಯ ರಾಜ್ಯಪಾಲರು ಆ ವರದಿಯನ್ನು ಸರಕಾರಕ್ಕೆ ಕಳುಹಿಸುತ್ತಾರೆ ಎಂದು ಇಟ್ಟುಕೊಳ್ಳೋಣ.

ಅಧ್ಯಕ್ಷರು.— ಆವಾಗ ತಮಗೆ ಮಾತನಾಡಲು ಅವಕಾಶವನ್ನು ಕಲ್ಪಿಸಿಕೊಡುತ್ತೇನೆ.

ಶ್ರೀ ಡಿ. ಬಿ. ಚಂದ್ರೇಗೌಡ.— ನಮ್ಮ ಹಕ್ಕನ್ನು ತಾವು ಎಲ್ಲಿ ರಕ್ಷಣೆ ಮಾಡಬೇಕಾಗಿರುವುದು ಅಂದರೆ, ಈ ವರದಿ ಸರಕಾರದ ಯಾವ ಮಂತ್ರಿಯೆ ಮುಂದೆ ಪರಿಶೀಲನೆಗೆ ಬರಬೇಕೋ ಅವರ ಮೇಲೆಯೇ ಆಪಾದನೆ ಇದೆ. ಈಗ ಇದು ಅವರೆ ಮ್ಯಾಟ್ರಿಯಲ್ಲಿರುವುದರಿಂದ ಅವರು ತಮ್ಮ ಪ್ರಯತ್ನವನ್ನು ಆ ದಿಶೆಯಲ್ಲಿ ಮಾಡಬಹುದು. ಅಥವಾ ವರದಿಯಲ್ಲಿ ಬಂದಿರತಕ್ಕಂಥ ವಿಚಾರಗಳಿಗೆ ಸಂಬಂಧಪಟ್ಟಂಥವರಿಂದ ಇನ್‌ಫ್ಲುಯೆನ್ಸ್‌ನ್ನು ಕೂಡ ಮಾಡುವ ಅವಕಾಶವು ಇದೆ. ಸಂಸದೀಯ ವ್ಯವಸ್ಥೆಯಲ್ಲಿ ಸಾಕಷ್ಟು ಅನುಭವ ಇರತಕ್ಕಂಥ ತಾವುಗಳು ಕೂಡ ಈ ಮಾತನ್ನು ಒಪ್ಪುತ್ತೀರಿ ಎಂದು ನಾನು ಅಂದುಕೊಂಡಿದ್ದೇನೆ. ಇಂಥ ವರದಿಗಳು ಕಮಿಷನ್ ಆಫ್ ಎನ್‌ಕ್ವೈರಿಯಂತೆ ಆಕ್ಟ್‌ನಲ್ಲಿ ತಯಾರಾಗಿರತಕ್ಕಂಥ ವರದಿಗಳಿಗೆ ಏನು ಗೌರವ ಸಲ್ಲಬೇಕೋ ಅದು ಸಂದಾಯವಾಗಬೇಕಾಗುತ್ತದೆ. ಆದರೆ ವರದಿಯಲ್ಲಿನ ಆಪಾದನೆಯು ಯಾರ ಮೇಲೆ ಇದೆಯೋ ಅವರೇ ಸಂಬಂಧಪಟ್ಟ ಇಲಾಖೆಯ ಮಂತ್ರಿಗಳಾಗಿರುವುದರಿಂದ, ಅವರ ಮೇಲೆಯೇ ದೊಡ್ಡ ಪ್ರಮಾಣದ ಚಾರ್ಜ್ ಬಂದಿರುವುದರಿಂದ ಈ ವರದಿಗೆ ಸಲ್ಲಬೇಕಾದ ಗೌರವ ಸಲ್ಲುವ ಬಗ್ಗೆ ನನಗೆ ಸಂಶಯ ಬರುತ್ತದೆ. ಏಕೆಂದರೆ ಈ ವರದಿಯನ್ನು ಸರಕಾರದವರು ಒಪ್ಪಿಕೊಳ್ಳಬೇಕೇ ಬಿಡಬೇಕೇ ಎಂಬ ಬಗ್ಗೆ ತೀರ್ಮಾನ ಮಾಡತಕ್ಕಂಥವರು ಕೂಡ ಸಂಬಂಧಪಟ್ಟ ಇಲಾಖಾ ಮಂತ್ರಿಗಳು ಆಗಿರುವುದರಿಂದ ಅದಕ್ಕೆ ಬಾಧಕವಾಗಿ ಆಗುತ್ತದೆ. ಮೇಲಾಗಿ ಈ ಒಂದು ಎನ್‌ಕ್ವಯರಿ ಕಮಿಶನ್ನಿನ ಅವಧಿ ಡಿಸೆಂಬರ್ ೨೫ಕ್ಕೆ ಮುಗಿಯುತ್ತದೆ. ಈಗ ಮಂತ್ರಿಗಳ ವಿರುದ್ಧ ಯಾರು ವರದಿಯನ್ನು ಕೊಟ್ಟರೂ ಕೂಡ ಅವರ ವಿರುದ್ಧ ಪ್ರತೀಕಾರ ಭಾವನೆಯನ್ನು ವ್ಯಕ್ತ ಮಾಡುವುದಕ್ಕೆ, ಪ್ರತೀಕಾರ ರೀತಿಯಲ್ಲಿ ವರ್ತಿಸುವುದಕ್ಕೆ ಅವಕಾಶ ಇದೆ. ಆದ್ದರಿಂದ ಕಮಿಷನ್ ಆಫ ಎನ್‌ಕ್ವೈರಿಯ ಅರ್ಧ ಕೆಲಸ ಏನು ಮುಗಿದಿದೆ ಇದನ್ನು ಮುಂದುವರಿಸುತ್ತೀರೋ ಇಲ್ಲವೋ ಹಾಗೂ ಮುಂದುವರಿಸುವುದಾದರೆ ಅಲ್ಲಿಯವರೆಗೆ ಯಾರು ವಕ್ಫ್ ಮಂತ್ರಿಗಳಿದ್ದಾರೆ, ಆ ಸಂಬಂಧಪಟ್ಟ ಮಂತ್ರಿಗಳ ಮೇಲೆ ಏನು ಚಾರ್ಜ್ ಬಂದಿದೆ ಆ ಚಾರ್ಜ್ ತೀರ್ಮಾನವಾಗುವತನಕ ಅವರನ್ನು ಮಂತ್ರಿ ಮಂಡಲದಿಂದ ಹೊರಗೆ ಇಡುತ್ತೀರಾ? ಅವರನ್ನು ಮಂತ್ರಿಮಂಡಳದಿಂದ ಹೊರಗೆ ಇಡಬೇಕೆಂದು ನಾನು ಪ್ರಾರ್ಥನೆ ಮಾಡುತ್ತೇನೆ.

MR. SPEAKER.— You are demanding resignation.

SRI D. B. CHANDRE GOWDA.— Before demanding the resignation, I would like to know whether the report is before the Government and Government will take action?

ಅಧ್ಯಕ್ಷರು— ವಸ್ತು ಸ್ಥಿತಿಯ ಬಗ್ಗೆ ತಾವು ಮಾತನಾಡಬೇಕು ನಾಳಿನ ಸ್ಥಿತಿಯ ಬಗ್ಗೆ ಅಲ್ಲ. The report is before the Governor.

ಶ್ರೀ ವಾಟಾಳ್ ನಾಗರಾಜ್.— ಹಿಂದೆ ಪತ್ರಿಕಾ ವರದಿಗಳ ಮೇಲೆ ಅನೇಕರು ರಾಜೀನಾಮೆಯನ್ನು ಕೊಟ್ಟಿದ್ದಾರೆ. ರಾಮರಾವ್‌ರವರು ಮಧುಗಿರಿಯ ಪ್ರಕರಣದ ಬಗ್ಗೆ ರಾಜೀನಾಮೆ ಕೊಟ್ಟಂತಹ ಉದಾಹರಣೆ ಇದೆ. ಶ್ರೀಮತಿ ರೇಣುಕಾ ರಾಜೇಂದ್ರನ್ ಅವರೂ ಕೂಡ, ಗುಂಡೂರಾವ್ ಅವರು ಮುಖ್ಯಮಂತ್ರಿಯಾಗಿದ್ದಾಗ ರಾಜೀನಾಮೆ ಕೊಟ್ಟಿದ್ದಾರೆ.

ಅಧ್ಯಕ್ಷರು. — ಈಗಾಗಲೇ ೪೦ ನಿಮಿಷವಾಯಿತು ಸಾಕೆ? ಹಿಂದೆ ರೈಲ್ವೆ ಆಕ್ಸಿಡೆಂಟ್ ಬಗ್ಗೆ ಲಾಲ್‌ಬಹದ್ದೂರ್ ಶಾಸ್ತ್ರಿಯವರು ರಾಜೀನಾಮೆ ಕೊಟ್ಟರು.

ಶ್ರೀ ಬಿ. ಎಸ್. ಯಡಿಯೂರಪ್ಪ.— ನೂರು ಕೋಟಿ ರೂಪಾಯಿಯ ಅವ್ಯವಹಾರಕ್ಕೆ ಳಂ ನಿಮಿಷ ಸಾಕು ಎಂದು ತಾವು ಹೇಳುತ್ತಿದ್ದೀರಿ. ಈ ಬಗ್ಗೆ ನಿಲುವಳಿ ಸೂಚನೆಯನ್ನು ತರುವುದಕ್ಕೆ ಅವಕಾಶ ಕೊಡಿ. ಈ ಕೇಸ್ ಮಾತ್ರ ಬೇರೆ ತರಹದ್ದು.

ಶ್ರೀ ಡಿ ಬಿ. ಚಂದ್ರೇಗೌಡ.— ಇದರಲ್ಲಿ ನಿಮ್ಮ ಭಾಷಣ ಇದೆ, ತಾವು ಅಭ್ಯಾಸ ಮಾಡಿ ವಿಶೇಷ ಸಂಸದೀಯ ಪಟು ಅಂತ ಅನ್ನಿಸಿಕೊಂಡಿದ್ದೀರಿ. ನಾನು ಆ ಅಭಿಪ್ರಾಯದ ಬಗ್ಗೆ ಚರ್ಚೆ ಮಾಡುವುದಿಲ್ಲ ಮತ್ತು ನಾನು ಅದನ್ನು ಕೋಟ್ ಕೂಡ ಮಾಡುವುದಿಲ್ಲ.

ಶ್ರೀ ಕೆ. ಹೆಚ್. ಪಾಟೀಲ್.—ಮಾನ್ಯ ಅಧ್ಯಕ್ಷರೇ, ಮಾನ್ಯ ವಿರೋಧಿ ಪಕ್ಷದ ನಾಯಕರು ಬಹಳ ಕಳಕಳಿಯಿಂದ ತಮ್ಮ ಗಮನ ಸೆಳೆದಿದ್ದಾರೆ. ಆದರೆ ನಾವು ಚರ್ಚೆ ಮಾಡಬೇಕಾದರೆ ಇದರ ವರದಿ ಇರಬೇಕು, ಆದರೆ ಅದು ನಮ್ಮ ಹತ್ತಿರ ಇಲ್ಲ. ಮಾನ್ಯ ರಾಜ್ಯಪಾಲರ ಹತ್ತಿರ ಇದೆಯೆಂಬ ಸುದ್ದಿಯ ಮೇಲೆ ಅದನ್ನು ಇಲ್ಲಿ ಚರ್ಚೆ ಮಾಡುವುದಕ್ಕೆ ಆಗುವುದಿಲ್ಲ. ಆ ವರದಿಯು ರಾಜ್ಯಪಾಲರ ಹತ್ತಿರ ಇದ್ದು ಅದನ್ನು ಅವರು ಓದಿ ವಿಚಾರ ಮಾಡಿ ಸಂಬಂಧಪಟ್ಟ ಮಂತ್ರಿಗಳನ್ನು ಡಿಸ್‌ಮಿಸ್ ಮಾಡುವುದಕ್ಕೆ ಬರುತ್ತದೆ. ಯಾವುದೇ ಎನ್‌ಕ್ವೈರಿ ಕಮಿಷನ್ ವರದಿಯು ಸರಕಾರಕ್ಕೆ ಬರಬೇಕು, ಸರಕಾರ ಅದನ್ನು ಒಪ್ಪಬಹುದು ಇಲ್ಲದಿದ್ದರೆ ಸರಕಾರ ಅದನ್ನು ಒಪ್ಪದೆ ಇರಬಹುದು ಆ ಅಧಿಕಾರ ಸರಕಾರಕ್ಕೆ ಇದೆ. ಸರಕಾರ ಅದನ್ನು ಒಪ್ಪದಿದ್ದರೆ ಆಗ ಈ ಸದನದಲ್ಲಿ ವಿಚಾರ ಮಾಡಬಹುದು. ಮಂತ್ರಿಗಳ ಮೇಲೆ ಆಪಾದನೆ ಬಂದರೆ ಮಾನ್ಯ ಮುಖ್ಯಮಂತ್ರಿಗಳು ಅದನ್ನು ವಿಚಾರ ಮಾಡಬಹುದು. ಆದೇ ಮುಖ್ಯಮಂತ್ರಿಗಳು ತಪ್ಪು ದಾರಿಯನ್ನು ಹಿಡಿದರೆ ಮಂತ್ರಿಗಳು ಅದು ತಪ್ಪು ಎಂದು ಹೇಳತಕ್ಕಂತಹ ಅಧಿಕಾರ ಅವರಿಗೆ ಇದೆ. ಆದರೆ ವರದಿ ಸರಕಾರಕ್ಕೆ ಬಂದಿಲ್ಲ. ಹಾಗಿರುವಾಗ ನಿಮಗೆ ಯಾರೋ ಕೊಟ್ಟಂತಹ ವರದಿ ನಿಜವಾದದ್ದು ಎಂದು ಹೇಗೆ ಹೇಳುತ್ತೀರಿ ? ಅದು ವರದಿಯೋ ಅಲ್ಲವೋ ಎಂದು ವಿಚಾರ ಮಾಡಬೇಕಾಗುತ್ತದೆ, ಅದನ್ನು ಮಾಡದೆ ಸರಕಾರದ ಮೇಲೆ ಗೂಬೆ ಹೊರಿಸುವುದು ಬೇಡ. ನಮ್ಮದು ತಪ್ಪು ಇದ್ದರೆ ಅದನ್ನು ತಿದ್ದುವುದಕ್ಕೆ ಬರುದಿಲ್ಲವೇ ?

ಶ್ರೀ ಡಿ. ಬಿ. ಚಂದ್ರೇಗೌಡ.—ಮಾನ್ಯ ಅಧ್ಯಕ್ಷರೇ, ಇದನ್ನು ನಾನು ಹೇಳುತ್ತಿಲ್ಲ. ಅವರಿಗೆ ಅದರ ಬಗ್ಗೆ ತಪ್ಪು ತಿಳಿದುಕೊಂಡರು. ಈಗ ತಾವು ಕೋಟ್ ಮಾಡಿದಿರಿ, ಮತ್ತು ಮೊನ್ನೆ ತಾನೆ ತಾವು ಹೇಳಿದಿರಿ ಕ್ರಿಶ್ಚಿಯನ್ ಕೀಲರ್ ಕೇಸ್‌ನಲ್ಲಿ ಪ್ರೊಫೂಮೊ ಅವರು ಏತಕ್ಕಾಗಿ ರಾಜೀನಾಮೆಯನ್ನು ಕೊಟ್ಟರು ? ಟಿ. ಟಿ ಕೃಷ್ಣಮಾಚಾರಿಯವರು ಚಾಗಲಾ ಆಯೋಗದ ವರದಿ ಮೇಲೆ ರಾಜೀನಾಮೆಯನ್ನು ಏತಕ್ಕೆ ಕೊಟ್ಟರು ? ಕೆ. ಡಿ. ಮಾಳವೀಯ ಅವರು ಸಿರಾಜುದ್ದೀನ್ ಕೇಸ್‌ನಲ್ಲಿ ಏತಕ್ಕಾಗಿ ರಾಜೀನಾಮೆಯನ್ನು ಕೊಟ್ಟರು ? ಇವೆನ್ನೆಲ್ಲಾ ನಾನು ಈಗ ಕೋಟ್ ಮಾಡುವುದಕ್ಕೆ ಹೋಗುವುದಿಲ್ಲ ನಮ್ಮ ರಾಜ್ಯದಲ್ಲಿ ಇಂತಹ ಸುಮಾರು ಎಂಟು-ಒಂಭತ್ತು ಪ್ರಕರಣಗಳ ಉದಾಹರಣೆಗಳನ್ನು ನಾವು ಉದಾಹರಿಸಬಹುದು. ಒಂದೊಂದು ಉದಾಹರಣೆಯಲ್ಲಿ ತಮ್ಮದೂ ಪಾಲು ಇದೆ. ಕೆಲವು ಸಾರಿ ಈ ವಿಚಾರವನ್ನು ಪ್ರಸ್ತಾಪ ಮಾಡಬಾರದು. ನಾನು ಗಂಭೀರವಾಗಿ ಇದನ್ನು ಓದಿ ಅರ್ಥ ಮಾಡಿಕೊಂಡಿದ್ದೇನೆ. ನೀವು ಏನೇನು ಸತ್ ಸಂಪ್ರದಾಯವನ್ನು ಹಾಕಿದ್ದೀರಿ, ಆ ಸಂಪ್ರದಾಯಕ್ಕೆ ವಿರುದ್ಧವಾಗಿ ನಾನು ಚರ್ಚೆಯನ್ನು ಮಾಡುತ್ತಿಲ್ಲ. ಆ ರೀತಿ ಮಾಡುವುದಿಲ್ಲ ಎನ್ನುವ ಭರವಸೆಯನ್ನು ಕೊಡುತ್ತೇನೆ. ನನಗೆ ಇಲ್ಲಿ ಪ್ರಶ್ನೆ ಇರತಕ್ಕಂಥದ್ದು ಇಷ್ಟೆ, ಇವತ್ತು ವರದಿ ಬಂದಿದೆ ಎಂದ ನಮಗೆ ತಿಳಿದುಬಂತು. ಇದು ಬೇರೆ ಒಬ್ಬರ ಕೈಯಲ್ಲಿ ಇಲ್ಲ, ಕಾನ್‌ಸ್ಟಿಟ್ಯೂಷನಲ್ ಹೆಡ್ ಕೈಯಲ್ಲಿ ಇದು ಸಿಕ್ಕಿದೆ, ಅವರು ಸರ್ಕಾರಕ್ಕೆ ನಾಳೆ ರೆಫರ್ ಮಾಡಬಹುದು.

ಅಧ್ಯಕ್ಷರು.—ಹೈಪೊಥೆಟಿಕಲ್.

ಶ್ರೀ ಡಿ. ಬಿ. ಚಂದ್ರೇಗೌಡ.—ನನಗೇನು ಸಮಸ್ಯೆ ಇದೆ ಎಂದು ಹೇಳಿದರೆ ಇವತ್ತು ಸದನದ ಕೊನೆಯ ದಿವಸ, ನಾಳೆ ನಾವು ಸಭೆ ಸೇರುತ್ತಿಲ್ಲ. ಈ ಒಂದು ಕಮಿಷನ್ನನ್ನು ಸರ್ಕಾರ ನೇಮಕ ಮಾಡಿತ್ತು, ಅದಕ್ಕೆ ಮತ್ತೆ ರಾಜ್ಯಪಾಲರು ಆರು ತಿಂಗಳಷ್ಟು ಜೀವದಾನ ಮಾಡಿದರು, ಈಗ ಅವರ ಮುಂದೆ ವರದಿಯನ್ನು ಕೊಟ್ಟಿದ್ದಾರೆ, ೨೫ನೇ ತಾರೀಖಿಗೆ ಈ ಕಮಿಷನ್ನಿನ ಟರ್ಮ್ ಮುಗಿಯುತ್ತದೆ. ಇನ್ನೂ ನೂರಾರು ಕೇಸ್‌ಗಳ ವಿಚಾರಣೆಯಾಗಬೇಕು. ಯಾವ ಕೇಸ್‌ಗಳ ವಿಚಾರಣೆಯಾಗಬೇಕು, ಅದಕ್ಕೆ ಪೂರ್ವಭಾವಿಯಾಗಿ ಕೆಲವು ಕೇಸ್‌ಗಳ ಬಗ್ಗೆ ವರದಿಯನ್ನು ಕೊಟ್ಟಿದ್ದಾರೆ. ನಾನು ಪೂರ್ತಿ ವರದಿ ಕೊಟ್ಟಿದ್ದಾರೆ ಎಂದು ಹೇಳುವುದಿಲ್ಲ. ಕೆಲವು ಕೇಸ್‌ಗಳ ಬಗ್ಗೆ ನಾನು ಹೇಳುತ್ತಿರುವುದು, ಹಾಗೆ ಕೊಟ್ಟಿರತಕ್ಕಂಥ ವರದಿ ಇಂಟರಿಮ್ ಅಲ್ಲ. ದಟ್ ಈಸ್ ದಿ ಫೈನಲ್. It is not Interim. That is a final so far as those cases are concerned. ಆ ಫೈನಲ್ ವರದಿಯೊಳಗೆ ಮಕ್ಕಳ ಮಂತ್ರಿಗಳನ್ನು ಇಂಡಿಕ್ಟ್ ಮಾಡಿದ್ದಾರೆ. ಹಾಗೆ ಪತ್ರಿಕೆಯಲ್ಲಿ ವರದಿ ಬಂದಿದೆ.

ಈ ಮಂತ್ರಿಗಳು ಈ ವರದಿಗಳನ್ನು ತರಿಸಿ ಸರ್ಕಾರಕ್ಕೆ ಅಥವಾ ಮುಖ್ಯಮಂತ್ರಿಗಳಿಗೆ ಅಥವಾ ಮಂತ್ರಿಮಂಡಲದ ಸಭೆಯಲ್ಲಿ ಇದನ್ನು ತೆಗೆದುಕೊಳ್ಳಬೇಕೋ ಅಥವಾ ಬೇಡವೋ ? ಇದನ್ನು ಅವರೇ ಪರಿಶೀಲನೆ ಮಾಡಬೇಕು. ಬೇರೆಯವರಾಗಿದ್ದರೆ ಕೇಳುತ್ತಿರಲಿಲ್ಲ. ಅವರೇ ಇದನ್ನು ಪರಿಶೀಲನೆ ಮಾಡಬೇಕು ಅಂದರೆ ಸಂಬಂಧಪಟ್ಟ ಮಂತ್ರಿಗಳೇ ಇದನ್ನು ಪರಿಶೀಲನೆ ಮಾಡಬೇಕು, ನಾಳೆ ಸರ್ಕಾರ ಯಾರೋ ಒಬ್ಬ ಮಂತ್ರಿಯನ್ನು ಇಂಡಿಕ್ಟ್ ಮಾಡಿದ್ದಾರೆ ಎಂದು ವರದಿಯನ್ನು ವಾಪಸ್ ಹಾಕಿಬಿಟ್ಟರೆ ಅಥವಾ ಕಮಿಷನ್ ಆಫ್ ಇನ್‌ಕ್ವೈರಿ ಅವಧಿಯನ್ನು ೨೫ನೇ ತಾರೀಖಿನ ನಂತರ ಮುಂದುವರಿಸದಿದ್ದರೆ ಯಾವ ಉದ್ದೇಶಕ್ಕಾಗಿ ಇದನ್ನು ನೇಮಕ ಮಾಡಿದೆಯೋ ಅದರ ಉದ್ದೇಶ ನಿಲುಗಡೆಯಾಗುತ್ತದೆ ಆ ಕಾರಣ ನಾನು ತಮ್ಮಲ್ಲಿ ಕನಿಷ್ಟವಾಗಿ ಇಷ್ಟಾದರೂ ಕೇಳುತ್ತೇನೆ. ಏನೆಂದರೆ, ಈ ವರದಿಯನ್ನು ಸರ್ಕಾರ ಒಪ್ಪಿಕೊಳ್ಳತಕ್ಕಂಥ ಹಂತದ ಪರಿಶೀಲನೆ ಮಾಡುವಾಗ ಯಾರ ಮೇಲೆ ಆಪಾದನೆ ಇದೆಯೋ ಆ ಮಂತ್ರಿಯನ್ನು ಹೊರತುಪಡಿಸಿ ನಿರ್ಣಯವನ್ನು ತೆಗೆದುಕೊಳ್ಳುತ್ತಾರೆಯೇ ಹೇಗೆ ಎಂದು ಹಾಗೆ ನಿರ್ಣಯವನ್ನು ತೆಗೆದ ಕೊಳ್ಳುವುದಕ್ಕಿಂತ ಮುಂಚೆ ಸಂಬಂಧಪಟ್ಟ ಮಂತ್ರಿಯು ರಾಜೀನಾಮೆಯನ್ನು ಕೊಡಬೇಕು ಎಂದು ಹೇಳುತ್ತಾರೆಯೋ ಅಥವಾ ವಜಾ ಮಾಡುತ್ತಾರೆಯೋ ಎನ್ನುವುದು ನನಗೆ ಗೊತ್ತಾಗಬೇಕು. ಏನಾದರೂ ಆಪಾದನೆ ಇದ್ದರೆ ಮಾತ್ರ ಇಲ್ಲ ಎಂದು ಹೇಳಿದರೆ ನಾನು ಕೇಳುವುದಿಲ್ಲ. ವೈಯಕ್ತಿಕವಾಗಿ ಅಜೀಜ್‌ಸೇಠ್‌ರವರ ಬಗ್ಗೆ ನನಗೆ ಅತ್ಯಂತ ಗೌರವವಿದೆ. ಅದಕ್ಕಾಗಿಯೇ ಒಂದು ಸಂಸ್ಥೆ ಇದೆ. ಆ ಒಂದು ಸಂಸ್ಥೆಯಲ್ಲಿ ಅನೇಕ ಸಂಸ್ಥೆಗಳ ಮಂತುವಲ್ಲಿ ಕೂಡಾ ಇರುತ್ತಾರೆ. ಎಲ್ಲರನ್ನು ಕೂಡಾ ಗೌರವದಿಂದ ಕಾಣಬೇಕಾದಂಥ ಜಾಗ ಅದು ಆದುದರಿಂದ ಅವರಲ್ಲಿ ನಾನು ಪ್ರಾರ್ಥನೆ ಮಾಡುತ್ತೇನೆ, ಇಂಥ ಸಂದರ್ಭ ಬಂದಾಗ ನಾನೂ ಕನಿಷ್ಟಪಕ್ಷ ಪ್ರಾಮಾಣಿಕ ಎಂದು ಹೇಳಿಕೊಳ್ಳುವುದಕ್ಕೆ ಸಾಧ್ಯವಿಲ್ಲ ದಿದ್ದರೂ, ಪ್ರಾಮಾಣಿಕ ಎಂದು ತೋರಿಸಿಕೊಳ್ಳುವುದಕ್ಕೆ ಅವರು ಇದರಲ್ಲಿ ನನ್ನ ಹಸ್ತಕ್ಷೇಪ ಇಲ್ಲ ಎಂದು ಹೇಳಿಕೊಳ್ಳುವುದಕ್ಕಾಗಿ ಅವರು ತಮ್ಮನ್ನು ತಾವೇ ಶುದ್ಧ ಎಂದು ಹೇಳಿಕೊಳ್ಳುವುದಕ್ಕಾದರೂ ಅವರು ಹೊರಗೆ ಉಳಿಯತಕ್ಕಂಥ ಪ್ರಯತ್ನವನ್ನು ಮಾಡುತ್ತಾರೆಯೋ ಅಥವಾ ಅವರು ಇಲ್ಲಿ ಹಸ್ತಕ್ಷೇಪವನ್ನು ಮಾಡುವುದಿಲ್ಲ ಎನ್ನತಕ್ಕಂಥ ವಿಶ್ವಾಸವನ್ನು ಈ ಸದನದಲ್ಲಿ ಕೊಡುತ್ತಾರೆಯೋ ಎನ್ನುವುದು ನನಗೆ ಮೂಲಭೂತವಾಗಿ ಬೇಕಾಗಿರತಕ್ಕಂಥದ್ದು.

SRI AZIZ SAIT.—Sir, I have been in political field for the last 42 years. My entire political life is without an iota of remark. The Leader of the Opposition Mr. D. B. Chandregowda personally knows aboute me and my character. Unfortunately, to-day he has raised this question. I would assure this House that this particular file has not been dealt with by me. I will see that this file is marked to the Hon. Chief Minister and will wait for appopriate action. The whole charge is malicious. It is not Commission's Report. It is one man report. The rest of the two members have not signed. The members also have given letter to the Government This is a serious matter pertaining to me, to my character and my reputation. I am not going to dispair. The said Commission was appointed when late Mr. Abdul Nazir Sub was Hon. Minister for Wakfs and Chairman for the Wakf Board. Here, the complainant is not there. The address is not found in the city of Mysore. The gentleman holding a Green Card has sent a letter.

MR. SPEAKER.— Do we have to go into the details ?

SRI AZIZ SAIT.— No, Sir.

ಶ್ರೀ ಬಿ. ಎಸ್. ಯಡಿಯೂರಪ್ಪ.— ನಮಗೆ ಬೇಕಾದ ಡೀಟೈಲ್ಸ್ ಅವರ ಹತ್ತಿರ ಇದೆ. ಅವರಿಗೆ ಮಾತನಾಡಲು ಅವಕಾಶ ಕೊಡಿ.

MR. SPEAKER.— I am not going to permit the Minister to go into the details

(ಗೊಂದಲ)

SRI AZIZ SAIT.— This file will be referred to the Chief Minister.

(INTERRUPTION)

MR. SPEAKER:— Nothing is out of the bag. Everything is within the bag in the Rajbhavan.

SRI D. B. CHANDRE GOWDA.— My submission is, the Hon. Minister categorically accepts and admits it.

MR. SPEAKER:— He admits the newspaper report.

(Interruption)

SRI B. S. YEDIYOORAPPA:— It is with the Government.

(Interruption)

MR, SPEAKER.— No. No.

ಶ್ರೀ ಬಿ. ಎಸ್. ಯಡಿಯೂರಪ್ಪ.— ಸಂಸದೀಯ ವ್ಯವಹಾರಗಳ ಸಚಿವರು ಸದನವನ್ನು ಅಡ್ಡ ದಾರಿಗೆ ಎಳೆದಿದ್ದಾರೆ.

MR. SPEAKER.— You are wrong on facts. You are certainly wrong on facts.

ಶ್ರಿ ಬಿ. ಎಸ್. ಯಡಿಯೂರಪ್ಪ. — ಸನ್ಮಾನ್ಯ ಕಂದಾಯ ಸಚಿವರು ಫೈಲ್ ಅನ್ನು ಚೀಫ್ ಮಿನಿಸ್ಟರ್‌ಗೆ ಕಳಿಸಿಕೊಟ್ಟಿದ್ದೇನೆಂದು ಹೇಳಿದರು...

(ಗೊಂದಲ)

MR. SPEAKER.—I have heard the Minister. I have heard the Leader of Opposion. and I have heard another Hon. Member also. ಈಗ ಮೂರು ವಿಚಾರಗಳು ಸ್ಪಷ್ಟವಾಗಿದೆ. ಒಂದು ಸರ್ಕಾರಕ್ಕೆ ತಾತ್ಕಾಲಿಕವಾದ ವರದಿ ಬಂದು ಸೇರಿಲ್ಲ.

(ಗೊಂದಲ)

MR. SPEAKER,— You read this newspaper.

SRI D. B. CHANDRE GOWDA.— He has said that.

(ಗೊಂದಲ)

ಶ್ರೀ ಬಿ. ಎಸ್. ಯಡಿಯೂರಪ್ಪ.— ಸನ್ಮಾನ್ಯ ವೀರಪ್ಪ ಮೊಯಿಲಿಯವರು ತಪ್ಪು ಮಾಹಿತಿಯನ್ನು ಸದನಕ್ಕೆ ಕೊಟ್ಟಿದ್ದಾರೆ.

ಅಧ್ಯಕ್ಷರು.— ಯಡಿಯೂರಪ್ಪನವರೇ, ನೀವು ಹಿರಿಯ ಸದಸ್ಯರು. ತಪ್ಪು ಮಾಹಿತಿಯನ್ನು ಸದನಕ್ಕೆ ಕೊಟ್ಟಿದ್ದಾರೆಂದು ತಾವು ಶೀರ್ಮಾನಕ್ಕೆ ಬರತಕ್ಕದ್ದು ತಪ್ಪಾಗುತ್ತದೆ.

SRI B. S. YEDIYOORAPPA.— No, Sir. ಕಂದಾಯ ಮಂತ್ರಿಗಳು ಹೇಳಿದ್ದಾರೆ. I am sorry.

ಅಧ್ಯಕ್ಷರು.— ಸಂಸದೀಯ ವ್ಯವಹಾರಗಳ ಖಾತೆಯ ಸಚಿವರು ಹೇಳುವುದು ಒಂದೇ. ಮಾನ್ಯ ಕಂದಾಯ ಮಂತ್ರಿಗಳು ಹೇಳತಕ್ಕದ್ದು ಒಂದೇ.

ಶ್ರೀ ಬಿ. ಎಸ್. ಯಡಿಯೂರಪ್ಪ.— ರೆಕಾರ್ಡ್ಸ್ ತೆಗೆಸಿ ನೋಡಿ ಸಾರ್ ತಪ್ಪಾಗಿದ್ದರೆ ಗೊತ್ತಾಗುತ್ತದೆ.

ಅಧ್ಯಕ್ಷರು.— ಸಚಿವರು ಏನು ಹೇಳಿದ್ದಾರೆ. ರಿಪೋರ್ಟ್ ರಾಜಭವನದಲ್ಲಿ ಇದೆ. ಗವರ್ನರ್ ಏನು ಮಾಡಿದ್ದಾರೋ ಗೊತ್ತಿಲ್ಲ. ಗವರ್ನರ್ ಏನು ಮಾಡಿದರು ಎನ್ನುವುದು ಯಾರಿಗೂ ಗೊತ್ತಿಲ್ಲ. ಸರ್ಕಾರದ ಹತ್ತಿರ ರಿಪೋರ್ಟ್ ಇದೆ ಎಂದು ಮಾನ್ಯ ವಿರೋಧ ಪಕ್ಷದ ನಾಯಂಕರ ಅನುಮಾನ. ರಿಪೋರ್ಟಿನಲ್ಲಿರತಕ್ಕ ಅಂಶವು ಕಂದಾಯ ಮಂತ್ರಿಗಳ ಮೇಲೆ ಆರೋಪಣೆ ಮಾಡಿರುವುದರಿಂದ ಅಲ್ಲಿ ನ್ಯಾಯ ಸಿಗುತ್ತದೆಯೇ ಎಂಬುದು ನಿಮ್ಮದು ಅನುಮಾನ. ಅವರು ಸದನಕ್ಕೆ ಒಂದು ಆಶ್ವಾಸನೆಯನ್ನು ಕೊಟ್ಟಿದ್ದಾರೆ. ಅವರು ೪೦ ವರ್ಷದ ತುಂಬು ಸಾರ್ವಜನಿಕ ಜೀವನದಲ್ಲಿ ಹೆಸರನ್ನು ಗಳಿಸಿರತಕ್ಕವರು. ಅಂತಹವರು ಸ್ಪಷ್ಟವಾದ ಹೇಳಿಕೆಯನ್ನು ಕೊಟ್ಟಿದ್ದಾರೆ. ಮಾನ್ಯ ಮುಖ್ಯ ಮಂತ್ರಿಗಳು ಬರುತ್ತಾರೆ ಎಂದಿದ್ದಾರೆ. ನನ್ನ ತಿಳುವಳಿಕೆ ಕೂಡ ರಾಜಭವನದಿಂದ ಏನಾದರೂ ಕಾಗದ ಪತ್ರಗಳು ಬಂದರೆ ಮುಖ್ಯಮಂತ್ರಿಗಳಿಗೆ ನೇರವಾಗಿ ಬರುತ್ತದೆ ಕಂದಾಯ ಸಚಿವರಿಗೆ ಬರುವುದಿಲ್ಲ ಅದು ನನ್ನ ಅನುಭವದ ಮಾತು. ಆದುದರಿಂದ ಇದು ಒಂದು ಡಿಸೆಪ್ಪಿಟೆಡ್ ಫ್ಯಾಕ್ಟ್. ವರದಿ ಇಲ್ಲಿಲ್ಲ. ರಾಜ್ಯಪಾಲರ ಭಾಷಣಕ್ಕೆ ವಂದನೆಯನ್ನು ಸಲ್ಲಿಸುವುದನ್ನು ಬಿಟ್ಟರೆ ಈ ಒಂದು ಶೂನ್ಯ ವೇಳೆಯಲ್ಲಿ ನಾನು ತಮ್ಮ ನಿಲುವಳಿ ಸೂಚನೆಯನ್ನು ತಿರಸ್ಕರಿಸಿದ್ದೇನೆ.

(ಗೊಂದಲ)

SRI D. B. CHANDRE GOWDA.— The Minister has said that the Commission is biased:

ಅಧ್ಯಕ್ಷರು.— ಈಗ ಗಮನ ಸೆಳೆಯುವ ಸೂಚನೆ. ಯಡಿಯೂರಪ್ಪನವರೇ ಕೇಳಿ.

ಶ್ರೀ ಸಿ. ಬೈರೇಗೌಡ.— ಮಾನ್ಯ ಯಡಿಯೂರಪ್ಪನವರು...

SRI D. B. CHANDRE GOWDA.— My submission is...

MR. SPEAKER.— Sri L. R. Shivarame Gowda.

ಶ್ರೀ ಡಿ. ಬಿ. ಚಂದ್ರೇಗೌಡ.— ತಮ್ಮ ತೀರ್ಪನ್ನು ನಾನು ಪ್ರಶ್ನೆ ಮಾಡುವುದಿಲ್ಲ. ಮಂತ್ರಿಗಳು ಹೇಳಿದ್ದು ಏನೆಂದರೆ...

MR. SPEAKER.— He has been very fair.

SRI D. B. CHANDRE GOWDA.— Please allow me to say something.

MR. SPEAKER:— The Leader of Opposition.

SRI K. H. PATIL.— The Speaker has announced the Ruling and the Leader of Opposition is questioning it.

SRI D. B. CHANDRE GOWDA.— I really commend the Minister for having said that he will not touch the file and send it to the Chief Minister, but what he said was, that the Chairman of the Commission was biased in his report. ಒಂದು ಕಡೆ ಫೈಲನ್ನು ಚೀಫ್‌ಮಿನಿಸ್ಟರ್‌ಗೆ ಕಳಿಸಂತ್ತೇನೆ ಎಂದು ಹೇಳುವುದು, ಇನ್ನೊಂದು ಕಡೆ ಛೇರ್ಮನ್ ಬಯಾಸ್ಡ್, ನನ್ನ ವಿರುದ್ಧ ಒಂದು ಪಿತೂರಿ ನಡೆದಿದೆ ಎಂದು ಹೇಳಿದರೆ ಇದು ಒಂದಕ್ಕೊಂದಕ್ಕೆ ಸಮನ್ವಯ ಎಲ್ಲಿದೆ ? Sir, I protest this because the concerned Minister positively makes a statement on the floor of the House against the Commission and the Chairman and he questions the very validity and the purpose of the Commission. This attitude...

MR. SPEAKER.— Hon. Leader of the Opposition, it is not the Minister who is questioning. It is the two Members of the Commission who are questioning.

SRI C. BYREGOWDA.— That is the contention of the Minister.

SRI D. B. CHANDRE GOWDA.— He says, the Chairman is biased. ಒಂದು ಕಮಿಷನ್ ಆಫ್ ಇನ್‌ಕ್ವೈರಿ ಬಗ್ಗೆ ಸಂಬಂಧಪಟ್ಟ ಮಂತ್ರಿಗಳು ಈ ಸದನವನ್ನು ಬಳಸಿಕೊಂಡು

ಇಷ್ಟು ಹಗುರವಾಗಿ ಹೇಳುವುದು ಸರಿಯಲ್ಲ. ನಾನು ಅದನ್ನು ಪ್ರೊಟಿಸ್ಟ್ ಮಾಡುತ್ತೇನೆ. With due respect to the Commission, this is character assassination of the Commission constituted under the Commissions of Enquiry Act and I protest it and stage a walk-out.

(At this stage Hon. Members belonging to Janata Dal, B.J.P. withdrew.)

ಶ್ರೀ ಸಿ. ಬೈರೇಗೌಡ.-- ಈ ಬಗ್ಗೆ ಏನು ರಿಕಾರ್ಡ್‌ಗೆ ಹೋಗಿದೆ ಎನ್ನುವುದನ್ನು ದಯವಿಟ್ಟು ತರಿಸಿ ನೋಡಿ.

ಅಧ್ಯಕ್ಷರು.-- ಈಗ ಗಮನ ಸೆಳೆಯುವ ಸೂಚನೆ, ಯಡಿಯೂರಪ್ಪನವರು, ಎಲ್. ಆರ ಶಿವರಾಮೇಗೌಡರು. ಇಂಗ್ಲೀಷಿನಲ್ಲಿ ಒಂದು ಗಾದೆ ಇದೆ. ''You cannot have the cake and eat it too.'' ಯಡಿಯೂರಪ್ಪನವರೆ, ನೀವು ಸಭಾತ್ಯಾಗ ಮಾಡಬೇಕು ಇಲ್ಲದೇಹೋದರೆ ಗಮನ ಸೆಳೆಯುವ ಸೂಚನೆ ಬಗ್ಗೆ ಕೇಳಬೇಕಂ.

ಶ್ರೀ ಬಿ. ಎಸ್. ಯಡಿಯೂರಪ್ಪ,-- ಇದರ ಬಗ್ಗೆ ಪ್ರತಿಭಟನೆ ಮಾಡಿ ನಾನು ವಾಕೌಟ್ ಮಾಡುತ್ತಾ ಇದ್ದೇನೆ.

(ಮಾನ್ಯ ಭಾರತೀಯ ಜನತಾ ಪಕ್ಷದ ಸದಸ್ಯರು ಸಭಾತ್ಯಾಗ ಮಾಡಿದರು)

೧೦-೦೦ ಎ. ಎಂ.

ಶ್ರೀ ಎಂ. ವೀರಪ್ಪಮೊಯಿಲಿ.—ಸ್ವಾಮಿ, ತಮ್ಮ ತೀರ್ಪಿನ ಮೇಲೆ ವಿರೋಧ ಪಕ್ಷದ ನಾಯಕರು ಮತ್ತು ಇತರೆ ಅವರ ಸಂಗಡಿಗರು ವಾಕೌಟ್ ಮಾಡಿದ್ದು ಖಂಡನೀಯ ಮತ್ತು ಸಂಸದೀಯ ಪರಂಪರೆಗೆ ಸರಿಯಾದ ಒಂದು ಮಾರ್ಗವಲ್ಲ. ಆದ್ದರಿಂದ ಈ ಸದನ ಇದನ್ನು ರೆಕಾರ್ಡ್ ಮಾಡಬೇಕೆಂದು ಹೇಳುತ್ತೇನೆ.

ಶ್ರೀ ಎಲ್. ಆರ್. ಶಿವರಾಮೇಗೌಡ.—ಸ್ವಾಮಿ, ಕಳೆದ ೨-೩ ದಿವಸದಿಂದ...

ಶ್ರೀ ಬಿ.ಎಸ್. ಯಡಿಯೂರಪ್ಪ.—ತಾವು ಅವಕಾಶ ಕೊಡುವುದಿಲ್ಲ ಅಂದರೆ, ತಮ್ಮ ತೀರ್ಮಾನವನ್ನು ಪ್ರಶ್ನೆ ಮಾಡಿ ಮಾತನಾಡತಕ್ಕ ಶಕ್ತಿ ಇಲ್ಲ. ವಿರೋಧ ಪಕ್ಷದ ನಾಯಕರು ಇನ್ನಿತರೆ ಸದಸ್ಯರು ಸೇರಿ ಪ್ರತಿಭಟನೆ ಮಾಡಿ ವಾಕೌಟ್ ಮಾಡಿದ್ದರಿಂದ, ಅದು ನನಗೂ ಒಪ್ಪಿತ ಇದ್ದುದರಿಂದ ವಾಕೌಟ್ ಮಾಡಿದೆ. ತಾವು ನನ್ನ ಹೆಸರು ಹೇಳಿದ ಕೂಡಲೇ ಪಾಪಸ್ಸು ಬಂದು ಮಾತನಾಡುವುದಕ್ಕೆ ನಿಂತಿದ್ದೇನೆ. ತಾವು ಬೇಡ ಎಂದು ಹೇಳಿದರೆ ನಾನು ಖಂಡಿತ ಮಾಡುವುದಿಲ್ಲ, ಅದು ತಮಗೇ ಬಿಟ್ಟಂತ ತೀರ್ಪು, ನಾನು ಅತ್ಯಂತ ಗೌರವದಿಂದ ಪ್ರಾರ್ಥನೆ ಮಾತನಾಡುತ್ತೇನೆ ಏನೆಂದರೆ, ತಾವು ನನ್ನ ಜಾಗದಲ್ಲಿದ್ದರೂ ಅದೇ ಕೆಲಸವನ್ನೂ ಮಾಡಂತಿದ್ದೀರಿ.

ಶ್ರೀ ಪಿ. ಜಿ. ಆರ್. ಸಿಂಧ್ಯ.—ಇದು ಮಹತ್ವದ ವಿಚಾರ, ತಾವು ಅವರಿಗೆ ಮಾತನಾಡುವುದಕ್ಕೆ ಅವಕಾಶ ಕೊಡಿ,

ಶ್ರೀ ಕಾಗೋಡು ತಿಮ್ಮಪ್ಪ —ಯಡಿಯೂರಪ್ಪನವರಿಗೆ ಅವಕಾಶ ಬೇಕೆಂದರೆ ಕೊಡುವುದಕ್ಕೆ ನಮ್ಮ ಆತಂಕ ಇಲ್ಲ. ಆದರೆ ನಾವು ಇಲ್ಲಿ ನಿಯಮಗಳನ್ನು ಪಾಲಿಸಬೇಕು. ಅಧ್ಯಕ್ಷರು ಕರೆದಾಗ ಅವರು ಸೀಟಿನಲ್ಲಿ ಇಲ್ಲದೇ ಇದ್ದುದರಿಂದ ಬೇರೆಯವರನ್ನು ಕರೆದಿದ್ದಾರೆ. ಅವರು ಮಾತನಾಡುವುದಕ್ಕೆ ಎದ್ದು ನಿಂತಿದ್ದಾರೆ. ಈ ಹಂತದಲ್ಲಿ ಸಂಪ್ರದಾಯವನ್ನು ಬದಲಾವಣೆ ಮಾಡತಕ್ಕದ್ದು ಒಳ್ಳೆಯ ಲಕ್ಷಣ ಅಲ್ಲ.

ಶ್ರೀ ಆರ್. ವಿ. ದೇಶಪಾಂಡೆ.—ಅಧ್ಯಕ್ಷರೇ. ಇದೇ ಮನೆಯಲ್ಲಿ ಪ್ರಶ್ನೋತ್ತರ ಆದ ಕೂಡಲೇ ಈ ಕಾಲಿಂಗ್ ಅಟೆನ್‌ಷನ್ ತೆಗೆದುಕೊಂಡು. ಸದಸ್ಯರು ಇಲ್ಲದೇ ಇದ್ದಾಗ. ಅವರು ಸಭೆಗೆ ಬಂದ ಮೇಲೆ ಮತ್ತೆ ತೆಗೆದುಕೊಂಡಿರುವಂಥ ಸಂಪ್ರದಾಯ ಇದೆ. ಆದ್ದರಿಂದ ಈಗ ಮಾನ್ಯ ಸದಸ್ಯರಿಗೆ ಅವಕಾಶ ಕೊಡಬೇಕೆಂದು ವಿನಂತಿ ಮಾಡಿಕೊಳ್ಳುತ್ತೇನೆ.

ಅಧ್ಯಕ್ಷರು.—ಈಗ ಮಾನ್ಯ ಸದಸ್ಯರನ್ನು ಕರೆದಿದ್ದೇನೆ. ತಮಗೆ ಕ್ಲಾರಿಫಿಕೇಷನ್ ಕೇಳುವುದಕ್ಕೆ ಅವಕಾಶ ಕೊಡುತ್ತೇನೆ.

ಶ್ರೀ ಬಿ. ಎಸ್. ಯಡಿಯೂರಪ್ಪ.—ತಾವು ನನ್ನ ಹೆಸರು ಕರೆದ ತಕ್ಷಣ ಎದ್ದು ನಿಂತು ಗಮನ ಸೆಳೆದಿದ್ದೇನೆ. ಆಗ ವಿರೋಧ ಪಕ್ಷದ ನಾಯಕರು ಮಾತನಾಡುತ್ತಿದ್ದರು ನಂತರ ಅವರು ಒಂದು ನಿಲುವು ತೆಗೆದುಕೊಂಡು ವಾಕ್‌ಔಟ್ ಮಾಡಿದಾಗ, ಅದು ನನಗೂ ಒಮ್ಮತ ಇದ್ದುದರಿಂದ ವಾಕ್‌ಔಟ್ ಮಾಡಿ ವಾಪಸ್ಸು ಬಂದಿದ್ದೇನೆ. ಈಗಾಗಲೇ ನಾನು ಗಮನ ಸೆಳೆದಿದ್ದೇನೆ.

ಶ್ರೀ ಎಲ್. ಆರ್. ಶಿವರಾಮೇಗೌಡ.—ಸಂಪ್ರದಾಯದ ಪ್ರಕಾರ ತಾವು ನನಗೆ ಮಾತನಾಡುವುದಕ್ಕೆ ಅವಕಾಶ ಕೊಟ್ಟಿದ್ದೀರಿ.

ಗಮನ ಸೆಳೆಯಂವ ಸೂಚನೆ

ರಾಜ್ಯದ ವ್ಯವಸಾಯೋತ್ಪನ್ನ ಸಹಕಾರ ಸಂಘಗಳ ನೌಕರರು ತಮ್ಮ ಬೇಡಿಕೆಗಳ ಈಡೇರಿಕೆಗಾಗಿ ನಡೆಸುತ್ತಿರುವ ಧರಣಿ ಮಂತ್ರಿ ಮುಷ್ಕರ

ಶ್ರೀ ಬಿ. ಎಸ್. ಯಡಿಯೂರಪ್ಪ.—ಮಾನ್ಯ ಅಧ್ಯಕ್ಷರೇ, ರಾಜ್ಯದ ವ್ಯವಸಾಯೋತ್ಪನ್ನ ಸಹಕಾರ ಸಂಘಗಳ ನೌಕರರು ತಮ್ಮ ಬೇಡಿಕೆಗಳ ಈಡೇರಿಕೆಗಾಗಿ ನಡೆಸುತ್ತಿರುವ ಧರಣಿ ಮತ್ತು ಮುಷ್ಕರದ ಬಗ್ಗೆ ಮಾನ್ಯ ಸಹಕಾರ ಮಂತ್ರಿಗಳ ಗಮನ ಸೆಳೆಯುತ್ತೇನೆ.

ಶ್ರೀಮತಿ ಮುನೀರಮ ಮಧ್ವರಾಜ್ (ಆರೋಗ್ಯ ಮತ್ತು ಸಹಕಾರ ಇಲಾಖಾ ಸಚಿವರು).—ಮಾನ್ಯ ಅಧ್ಯಕ್ಷರೇ.

ಸಹಕಾರ ಸಂಘಗಳು ಪ್ರಜಾಸತ್ತಾತ್ಮಕ ಹಾಗೂ ಸ್ವತಂತ್ರ ಸಂಸ್ಥೆಗಳಾಗಿವೆ. ಅವು ಕೇವಲ ಸರ್ಕಾರದ ಮೇಲ್ವಿಚಾರಣೆಗೆ ಒಳಪಟ್ಟಿರುವವೇ ವಿನ: ಅವರ ಆಡಳಿತ ವೆಚ್ಚದ ಬಗ್ಗೆ ಸಹಕಾರಿ ಸಂಸ್ಥೆಗಳೇ ತಮ್ಮ ಉತ್ಪನವನ್ನು ಹೆಚ್ಚಿಗೆ ಮಾಡಿಕೊಳ್ಳಬೇಕಾಗಿದೆ. ಸಹಕಾರಿ ಸಂಘಗಳಲ್ಲಿ ದುಡಿಯುವ ಈ ನೌಕರರ ವೇತನ ಇಂದಿನ ಪರಿಸ್ಥಿತಿಯಲ್ಲಿ ಗಮನಿಸಿದರೆ ಹೆಚ್ಚಿಸುವುದು ಅವಶ್ಯ. ಆದರೆ ಹೆಚ್ಚಳವಾದ ವೇತನವನ್ನು ಭರಿಸುವ ಸಾಮರ್ಥ್ಯ ಆಯಾ ಸಂಘಗಳಲ್ಲಿ ಗಳಿಸುವ ಆದಾಯ ಮಿತಿಯನ್ನು ಅವಲಂಬಿಸಿವೆ, ಈ ಸಂಘಗಳ ಉತ್ಪನ್ನವನ್ನು ಯಾವ ಮಾರ್ಗಗಳಿಂದ ಹೆಚ್ಚು ಮಾಡಬೇಕೆಂಬುದರ ಬಗ್ಗೆ ಸರ್ಕಾರ ತೀವ್ರ ಪರಿಶೀಲನೆ ಮಾಡುವ ಭರವಸೆ ಕೊಡುತ್ತಿದೆ. ಈಗಾಗಲೇ ಸಹಕಾರಿ ಅಧಿಕಾರಿಗಳೊಡನೆ ಹಾಗೂ ನೌಕರರ ಸಂಘಗಳ ಪ್ರತಿನಿಧಿಗಳೊಡನೆ ಸಮಾಲೋಚನೆ ನಡೆಸಿದ್ದೇನೆ. ಕಾನೂನಿನ ಚೌಕಟ್ಟಿನಲ್ಲಿ ಯಾವ ರೀತಿಯಿಂದ ಉತ್ಪನ್ನವನ್ನು ಹೆಚ್ಚು ಮಾಡಲಿಕ್ಕೆ ಬರುತ್ತದೆಯೋ ಎಂಬುದನ್ನು ಸಹಕಾರಿ ಖಾತೆಯ ಅಧಿಕಾರಿಗಳೊಂದಿಗೆ ವಿಚಾರಿಸಿ, ವಿವರಗಳನ್ನು ಸಲ್ಲಿಸಲಿಕ್ಕೆ ತಿಳಿಸಲಾಗಿದೆ. ಅವರಿಂದ ಬರುವ ಅಂಶಗಳನ್ನು ಪರಿಶೀಲಿಸಿ, ಈ ನೌಕರರ ಬಗ್ಗೆ ಸಹಾನುಭೂತಿ ಪೂರಕವಾದ ಕಾರ್ಯಕ್ರಮಗಳನ್ನು ಕೈಗೊಳ್ಳಲಾಗುವುದು.

ಆದುದರಿಂದ ಎಲ್ಲ ಸಹಕಾರಿ ಸಂಘಗಳ ನೌಕರರು ಸಹಕಾರಿ ತತ್ವಗಳ ಮೇಲೆ ನಿಷ್ಠೆ ಇಟ್ಟು ತಮ್ಮ ತಮ್ಮ ಕಾರ್ಯಗಳಲ್ಲಿ ಮರಳಬೇಕೆಂದು ಮತ್ತು ತಮ್ಮ ಧರಣಿ ನಿಲುವನ್ನು ಅಂತ್ಯಗೊಳಿಸಬೇಕೆಂದು ಬಿನ್ನವಿಸಿಕೊಂಡಿರುತ್ತೇನೆ.

† ಶ್ರೀ ಬಿ. ಎಸ್. ಯಡಿಯೂರಪ್ಪ.—ಸನ್ಮಾನ್ಯ ಅಧ್ಯಕ್ಷರೆ, ಈ ವಿಷಯದ ಬಗ್ಗೆ ಸನ್ಮಾನ್ಯ ಸಚಿವರಿಗೆ ತಮ್ಮ ಮೂಲಕ ಗಮನ ಸೆಳೆಯಂವ ಅಂಶ ಏನೆಂದರೆ, ಕಳೆದ ಒಂದು ನೂರು ದಿವಸಗಳಿಂದಲೂ ಈ ರಾಜ್ಯದ ವ್ಯವಸಾಯೋತ್ಪನ್ನ ಸಹಕಾರ ಸಂಘಗಳ ನೌಕರರೆ ಎಲ್ಲರೂ ಸಹ ತಮ್ಮ ನ್ಯಾಯ ವಾದಂಥ ಬೇಡಿಕೆಯನ್ನು ಈಡೇರಿಸಬೇಕೆಂದು ಧರಣಿ ಸತ್ಯಾಗ್ರಹ ಮಾಡುತ್ತಿದ್ದಾರೆ. ಈ ಪಂಥ್ಯ ರಾಜ್ಯಪಾಲರನ್ನು ಭೇಟಿ ಮಾಡಿದ್ದರು. ಸಂಬಂಧಪಟ್ಟಂತಹ ಉನ್ನತ ಅಧಿಕಾರಿಗಳನ್ನು ಭೇಟಿ ಮಾಡಿದ್ದರು. ಆದರೆ ಇದುವರೆಗೂ ಅವರಿಗೆ ನಿಶ್ಚಿತವಾದಂಥ ಯಾವುದೇ ಪರಿಹಾರ ಮಾರ್ಗವನ್ನು ಸೂಚಿಸದೇ ಇದ್ದುದರಿಂದ, ಅನಿರ್ಧಿಷ್ಟ ಧರಣಿ ಸತ್ಯಾಗ್ರಹವನ್ನು ಮುಂದುವರಿಸುತ್ತಿದ್ದಾರೆ. ಹಿಂದೆ ಈ ಒಂದು ಸಹಕಾರ ಸಂಘದ ನೌಕರರ ಒಂದು ಸಮಸ್ಯೆಯನ್ನು ಬಗೆಹರಿಸುವ ದೃಷ್ಟಿಯಿಂದ ಹಿಂದಿನ ಸರ್ಕಾರ ಶ್ರೀ ಅಜ್ಜೀಬಾಳ್ ಹೆಗಡೆಯವರ ಅಧ್ಯಕ್ಷತೆಯಲ್ಲಿ ಒನ್ ಮ್ಯಾನ್ ಕಮಿಟಿ ಎಂದು ನೇಮಕ ಮಾಡಿದ್ದರು. ಇವರುಗಳ ಸಮಸ್ಯೆಗಳನ್ನು ಬಗೆಹರಿಸುವ ದೃಷ್ಟಿಯಿಂದ ಸರ್ಕಾರಕ್ಕೆ ಸಲಹೆ ಸೂಚನೆಗಳನ್ನು ಕೊಡಬೇಕೆಂದು ಸಮಿತಿ ನೇಮಕ ಮಾಡಿದ್ದರು. ಮಾನ್ಯ ಅಜ್ಜೀಬಾಳ್ ಹೆಗಡೆಯವರು ಇದರ ಬಗ್ಗೆ ತಮ್ಮದೇ ಆದಂಥ ವರದಿಯನ್ನು ಸರ್ಕಾರಕ್ಕೆ ಕಳುಹಿಸಿ ಕೊಟ್ಟಿದ್ದಾರೆಂದು ನಾನು ಅಂದು ಕೊಂಡಿದ್ದೇನೆ. ಈಗಾಗಲೇ ಈ ರೀತಿಯಲ್ಲಿ ಸಹಕಾರ ಸಂಘಗಳಲ್ಲಿ ಕೆಲಸ ಮಾಡುತ್ತಿರುವಂಥ ನೌಕರರಿಗೆ